ಅಂಕಣ

ನವಂಬರ್ 1982

ಕೆಲವು ವಿಚಾರಗಳು

ಶ್ರೀರಂಗ

ಕರ್ನಾಟಕದಲ್ಲಿ ಕಡ್ಡಾಯ ಶಿಕ್ಷಣ

ಸಿ. ಎಸ್. ನಾಗರಾಜ್

ಅಮೃತಾ ಪ್ರೀತಮ್ ಅವರೊಂದಿಗೆ ಒಂದು ಸಂದರ್ಶನ

ರಮಾ ರಷ್ಮಾ

ಅಂಕಣ

ನವಂಬರ್ 1982

ಸಂಪುಟ-4 ಸಂಚಿಕೆ-2

'ಅಂಕಣ' ಅನಿವಾರ್ಯ ಕಾರಣಗಳಿಂದ ತಡವಾಗಿದೆ. ದಯವಿಟ್ಟು ಸಹಕರಿಸಿ. ಉಳಿದ ಸಂಚಿಕೆಗಳು ಶೀಘ್ರದಲ್ಲಿಯೇ ಬರಲಿವೆ.

'ಅಂಕಣ' (ಸೆಪ್ಟೆಂಬರ್ 1982)ರಲ್ಲಿ ಶ್ರೀ ವಿಶ್ವೇಶ್ವರ ಅವರ ಲೇಖನದ ಶೀರ್ಷಿಕೆ 'ಬೇಂದ್ರೆಯವರ ಕವನಗಳನ್ನು ಕುರಿತು' ಬದಲಾಗಿ 'ಬೇಂದ್ರೆಯವರ ಕೆಲವು ಕವನಗಳನ್ನು ಕುರಿತು' ಎಂದು ಅಚ್ಚಾಗಿದೆ. ಈ ತಪ್ಪಿಗಾಗಿ 'ಅಂಕಣ' ಸಂಪಾದಕ ವರ್ಗ ವಿಷಾದಿಸುತ್ತದೆ.

'ಅಂಕಣ' ಪ್ರಕಾಶನದ ಎರಡನೆಯ ಪುಸ್ತಕ ಬಿಡುಗಡೆಯಾಗಿದೆ. ನೀವು ಮತ್ತು ನಿಮ್ಮ ಸ್ನೇಹಿತರು ಈ ಪುಸ್ತಕಗಳನ್ನು ಕೊಂಡು ಓದಿ ಪ್ರೋತ್ಸಾಹಿಸಿ.

ನಿಮ್ಮ ವಿಳಾಸ ಬದಲಾದರೆ ನಮಗೆ ಕೂಡಲೇ ತಿಳಿಸಿ.

–ಅಂಕಣ

8, 'ಚಿರಂಜೀವಿ', ಹಳೇ ಈಜುಕೊಳದ ರಸ್ತೆ, ಕೋದಂಡರಾಮಪುರ, ಬೆಂಗಳೂರು-560 003

ಈ ಸಂಚಿಕೆಯಲ್ಲಿ

ಲೇಖನಗಳು

ಪ್ರಕಟಣೆ : 'ಪಿ. ಪಿ' ಬಳಗದ ಗೆಳೆಯರಿಂದ

ವಾರ್ಷಿಕ ಚಂದಾ : ಹತ್ತು ರೂಪಾಯಿ

'ಅಂಕಣ' ಸ್ಥಾಯಿನಿಧಿ : ನೂರು ರೂಪಾಯಿ

ನಾನು ಮತ್ತು ಕನ್ನಡ

ನಾನು ಕಾಲೇಜಿಗೆ ಹೋಗುವವರೆಗೆ ನನಗೆ ಕರ್ನಾಟಕ ಮತ್ತು ಕನ್ನಡ ಇವುಗಳ ಬಗ್ಗೆ 'ಅಭಿಮಾನ' ಎನ್ನುವುದಿದ್ದಿತೆಂದು ನಾನು ಹೇಳಲಾರೆ. ಹೈಸ್ಕೂಲ್ ಶಿಕ್ಷಣಕ್ಕೆಂದು ವಿಜಾಪುರಕ್ಕೆ ಹೋದ ಮೇಲೆ ಅಲ್ಲಿಯ ವಾತಾವರಣವೂ ಈ ಅಭಿಮಾನವನ್ನು ಜಾಗೃತಗೊಳಿಸುವಂತಹದಾಗಿರಲಿಲ್ಲ. ನಗರದ ಪ್ರಮುಖ ಪುಢಾರಿಗಳು ಮರಾಠಿಯಲ್ಲಿಯೇ ಸಾರ್ವಜನಿಕ ಭಾಷಣಗಳನ್ನು ಮಾಡುತ್ತಿದ್ದರು. ಆಗ ಅಕಸ್ಮಾತಾಗಿ ದಿ. ಜಯರಾವ್ ದೇಶಪಾಂಡೆ ಎನ್ನುವವರು 1920ರ ಸುಮಾರಿಗೆ ಸ್ಥಳೀಯ ಕಾಂಗ್ರೆಸ್ ಮುಂದಾಳಾಗಿದ್ದು ಕನ್ನಡದಲ್ಲಿಯೇ ಭಾಷಣವನ್ನು ಮಾಡಿದರು. ಆ ನಿರರ್ಗಳ ಶೈಲಿ ವಿದ್ಯಾರ್ಥಿಗಳಾದ ನಮ್ಮಲ್ಲಿ ಏನೊ ಒಂದು ಹೊಸ ಉತ್ಸಾಹಪೂರ್ಣ ಭಾವನೆಯನ್ನು ಹುಟ್ಟಿಸಿತು. ಮುಂದೆ ಒಂದೆರಡು ಸಲ ಪುಢಾರಿಗಳು ಮರಾಠಿಯಲ್ಲಿ ಮಾತನಾಡತೊಡಗಲು, ಗಲಭೆಯನ್ನೆಬ್ಬಿಸಿ ಅವರನ್ನು ಕನ್ನಡದಲ್ಲಿ ಮಾತನಾಡಲು ಒತ್ತಾಯಿಸಿದ್ದೆವು. ಅವರಲ್ಲಿ ಕನ್ನಡದ ಅಭಿಮಾನಕ್ಕಿಂತ ಗಲಭೆ ಎಬ್ಬಿಸುವ ಇಚ್ಛೆಯೆ ಪ್ರಬಲವಾಗಿರಬಹುದಾಗಿದೆ.

ಕೆಲವು ವಿಚಾರಗಳು

ಶ್ರೀರಂಗ

ತರುವಾಯ ಕಾಲೇಜು ಶಿಕ್ಷಣಕ್ಕಾಗಿ ಪುಣೆಗೆ ಹೋದೆ. ಅಲ್ಲಿ ವಿಜಾಪುರ–ಧಾರವಾಡ ಗೆಳೆಯರೊಡನೆ ಕನ್ನಡ ; ಮರಾಠಿ ಜ್ಞಾನವೆ ಇಲ್ಲದ್ದರಿಂದ ಮಿಕ್ಕ ಗೆಳೆಯರೆ ಇದ್ದಿರಲಿಲ್ಲ. ನನ್ನ ಅನೇಕ ಕನ್ನಡ ಮಿತ್ರರು ಮರಾಠಿಯಲ್ಲಿ ಮಾತನಾಡಬಲ್ಲವರಾಗಿದ್ದರು. ಬೆಳಗಾವಿಯವರಂತೂ ತಂತಮ್ಮೊಳಗೆ ಕೂಡ ಮರಾಠಿಯಲ್ಲಿಯೆ ಮಾತನಾಡುತ್ತಿದ್ದರು. ಕನ್ನಡ ಒಂದನ್ನೆ ಅರಿತ ನಾನು ಮೊದಲು ಕಾಲೇಜ್ ಮ್ಯಾಗಜಿನ್‌ದ ಕನ್ನಡ ವಿಭಾಗಕ್ಕಾಗಿ ಒಂದು ಲೇಖನ ಇಲ್ಲವೆ ಒಂದು ಕವಿತೆಯನ್ನು ಬರೆಯುತ್ತಿದ್ದೆ ; ಮುಂದೆ ಆ ವಿಭಾಗಕ್ಕೆ ಸಂಪಾದಕನಾದೆ. ಓದುಗರ ಅಭಾವದಲ್ಲಿ ಬರೆಯುವುದು ಆಗಿನಿಂದಲೇ ಪ್ರಾರಂಭವಾಯಿತೆನ್ನಬಹುದು. ಮುಂದೆ ಇಂಗ್ಲೆಂಡಿಗೆ ಹೋದೆ. ಮೂರು ವರ್ಷ ಕನ್ನಡದ ಸಂಪರ್ಕವೆ ಇದ್ದಿರಲಿಲ್ಲ.

ಇಂಗ್ಲೆಂಡಿನಿಂದ ಮರಳಿದ ಮೇಲೆ ಧಾರವಾಡ ಕಾಲೇಜಿಗೆ ಬಂದೆ, ಸಂಸ್ಕೃತ ಅಧ್ಯಾಪಕನೆಂದು. ಧಾರವಾಡವು ಕನ್ನಡದ ಗಂಡುಮೆಟ್ಟು, ಎಂಬ ಭಾವನೆ ಮುಂಚಿನಿಂದಲೂ ಇದ್ದಿತು. ಆದರೆ ಕಾಲೇಜಿನ ವಾತಾವರಣದಲ್ಲಿ ಕನ್ನಡಕ್ಕಿಂತ ಮರಾಠಿಗೆಯೆ ಪ್ರಾಬಲ್ಯವಿದ್ದಿತು. ಕಾಲೇಜಿನ ಅನೇಕ ಅಧ್ಯಾಪಕರು ಮರಾಠಿಗರಾಗಿದ್ದು ಕನ್ನಡದ ಬಗ್ಗೆ ಅವರಲ್ಲಿ ಒಂದು ತರದ ತಿರಸ್ಕಾರದ ಭಾವನೆ ಇದ್ದಿತು. ಪುಣೆಯಲ್ಲಿಯೂ ಈ ತರದ

ಅನುಭವನಾಗಿದ್ದಿತು ನನಗೆ. ಆದರೆ ಧಾರವಾಡದ ಕಾಲೇಜಿನಲ್ಲಿ ಅಂತಹ ಪರಿಸ್ಥಿತಿ ಇದ್ದುದು ಮೊದಲು ನನ್ನ ಸ್ವಾಭಿಮಾನವನ್ನು ಕೆರಳಿಸಿತು. ಕನ್ನಡದ ಅಭಿಮಾನಕ್ಕಿಂತ ಸ್ವಾಭಿಮಾನವೆ ಹೆಚ್ಚು ಜಾಗೃತವಾದುದರಿಂದ ಕಾಲೇಜಿನಲ್ಲಿ ಕರ್ನಾಟಕ ಸಂಘದ ಜೀರ್ಣೋದ್ಧಾರ ಮಾಡಲು (ನಾನು ಹೋದಾಗ ಅದು ಜೀವನ್ಮರಣಾವಸ್ಥೆಯಲ್ಲಿದ್ದಿತು) ಮುಂದಾದೆ. ನನಗೆ ಅರಿಯದೆಯೆ ನಾನು ಕನ್ನಡಿಗನಾದೆ. ಇದಕ್ಕೂ ಮುಂಚಿತ ನಾನು ಬರೆದ ಒಂದು ನಾಟಕವನ್ನು ಕಾಲೇಜ್ ವಿದ್ಯಾರ್ಥಿಗಳು ಆಡಿದಾಗ ಅಲ್ಲಿಯ ಬೇರೆ ನನ್ನ ಕನ್ನಡಿಗ ಸಹಾಧ್ಯಾಪಕರೂ ನಾಟಕ ಮುಗಿದೊಡನೆ ಮರಾಠಿಯ ವಿರುದ್ಧ ನನ್ನ ಸ್ವತಂತ್ರ ಕನ್ನಡ ನಾಟಕವನ್ನು ಆವೇಶದಿಂದ ಹೊಗಳ ತೊಡಗಿದರು. ನನಗೆ ಆಶ್ಚರ್ಯವಾಯಿತು. ನನಗೆ ಗೊತ್ತಿದ್ದ ಒಂದೇ ಒಂದಾದ ಕನ್ನಡದಲ್ಲಿ ನಾನು ಅನಿವಾರ್ಯವಾಗಿ ಬರೆದಿದ್ದೆನಲ್ಲದೆ, ಕನ್ನಡದ ಅಭಿಮಾನದಿಂದ ಬರೆದಿರಲಿಲ್ಲವಲ್ಲ ! ಆದರೆ ಆ ಆವೇಶವನ್ನು ಕಂಡು ಕನ್ನಡದ ಸ್ಥಾನ ಎಷ್ಟು ಕೆಳಗಿದೆ ಎಂಬುದು ಹೊಳೆದು ನನಗೆ ಅತ್ಯಂತ ಖೇದವಾಯಿತು. ಆ ಮನಃಸ್ಥಿತಿಯಲ್ಲಿದ್ದಾಗ ದಿ. ಅ. ತು. ಸಾಸನೂರ ಎಂಬ ಕನ್ನಡ ಅಧ್ಯಾಪಕರು ನನ್ನಲ್ಲಿ ಕನ್ನಡದ ಅಭಿಮಾನವನ್ನು ಮೂಡಿಸಲು ಬಲವಾದ ಪ್ರೇರಕರಾದರು. ನಾಟಕದಿಂದ ನಾಟಕಕ್ಕೆ ನನಗೆ ಉತ್ತೇಜನವನ್ನು ಕೊಟ್ಟರು. ಕನ್ನಡದ ಬಗ್ಗೆ ಅಭ್ಯಾಸ ಇಲ್ಲವೆ ಜ್ಞಾನ ಇಲ್ಲದಿದ್ದ ನಾನು ಕನ್ನಡ ಪಂಡಿತರಾದ ಅವರ ಉತ್ತೇಜನ ವಿಮರ್ಶೆಗಳಿಂದ ಕ್ರಮೇಣ ಕನ್ನಡದ ಅಭಿಮಾನಿಯಾದೆ. 2-3 ವರ್ಷಗಳಲ್ಲಿ ಅವರು ನನ್ನನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ 'ನೂಕಿದರು'–ಅದೇ ಸಮರ್ಪಕವಾದ ಶಬ್ದ ಇದನ್ನು ತಿಳಿಸುವುದಕ್ಕೆ–ನನ್ನಲ್ಲಿ ತುಸು ಅಹಂಕಾರವೂ ಮೂಡಿರಬಹುದಾಗಿದೆ. ಯಾಕೆಂದರೆ ಕ್ರಮೇಣ ಕಾಲೇಜಿನಲ್ಲಿ ಕನ್ನಡ ಚಳವಳದ ನಾಯಕ ನಾನು ಎಂದು ತಿಳಿದುಕೊಂಡು 4-6 ವರ್ಷಗಳಲ್ಲಿ ಮರಾಠಿಯ ಪ್ರಾಬಲ್ಯವನ್ನು ಕುಗ್ಗಿಸಿ ಕನ್ನಡ ಮೊದಲಿನ ಸ್ಥಾನವನ್ನು ಆಕ್ರಮಿಸುವಂತೆ ಮಾಡುವುದರಲ್ಲಿ ಮುಂದಾದೆ.

ಕಾಲೇಜಿನಲ್ಲಿಯ ನನ್ನ ನಾಯಕತ್ವವು ಹೊರಗೂ ತನ್ನ ಪ್ರಭಾವವನ್ನು ಹರಡಿತೆಂದು ನನಗೆನ್ನಿಸುತ್ತಿದೆ. ಯಾಕೆಂದರೆ, ಕ್ರಮೇಣ ನನಗೆ ಅಲ್ಲಿಯ ಹಳೆಯ ಸಂಸ್ಥೆಯಾದ ವಿದ್ಯಾವರ್ಧಕ ಸಂಘದಲ್ಲಿ ಅವಕಾಶ ಸಿಕ್ಕಿತಲ್ಲದೆ ನಾಡಹಬ್ಬದ ಆಮಂತ್ರಣಗಳೂ ಬರತೊಡಗಿದುವು.

ಕಾಲೇಜದ ಕರ್ನಾಟಕ ಸಂಘ ಮತ್ತು ವಿದ್ಯಾವರ್ಧಕ ಸಂಘ ಇವೆರಡರ ಸಂಬಂಧದಿಂದ ನನಗೆ ಗೋವಿಂದ ಪೈಯವರನ್ನು ಮೊದಲ್ಗೊಂಡು ಅನೇಕ ಹಿರಿಯ ಕನ್ನಡ ವಿದ್ವಾಂಸರ ನಿಕಟ ಪರಿಚಯ ಶಕ್ಯವಾಯಿತು. ಸಾಹಿತ್ಯ ಪರಿಷತ್ತಿನ ಸದಸ್ಯನಾದುದಕ್ಕೆ ಆ ಸ್ಥಾನ ಭದ್ರವಾಯಿತು. ಕಾಲೇಜಿನಲ್ಲಿ ಕರ್ನಾಟಕ ಸಂಘದ ಸಹಾಯದಿಂದ ತರುಣ ವಿದ್ಯಾರ್ಥಿಗಳಲ್ಲಿ ಕನ್ನಡಕ್ಕಾಗಿ ಜಾಗೃತಿ ಮೂಡಿದ್ದನ್ನು ಕಂಡು ಸಾಹಿತ್ಯ ಪರಿಷತ್ತಿನ ಸಹಾಯದಿಂದ ಇಡಿಯ ಕನ್ನಡಿಗರಲ್ಲಿ ಜಾಗೃತಿಯನ್ನು ಮೂಡಿಸಬಹುದಲ್ಲ ಎಂಬ ವಿಚಾರ ಬಂದಿತು. ಅಂದು ಸಾಹಿತ್ಯ ಪರಿಷತ್ತು ಕೆಲವೇ ಪಂಡಿತರ ಸೊತ್ತಾ

ಗಿತ್ತು. ಸಾಮಾನ್ಯರಿಗೆ ಅದರ ಸಂಪರ್ಕವಿದ್ದಿರಲಿಲ್ಲ, ಅದಕ್ಕಾಗಿ ಆಸಕ್ತಿ ಇರಲಿಲ್ಲ. ಆದುದರಿಂದ ಪರಿಷತ್ತಿನ ಘಟನೆಯನ್ನೆ ಬದಲಾಯಿಸಿ, ಬೇರೆ ಬೇರೆ ಕಡೆ ಅದರ ಶಾಖೆಗಳನ್ನು ಸ್ಥಾಪಿಸಿ, ಬೇರೆ ಬೇರೆ ನಗರಗಳಲ್ಲಿ ಆದರ ಕಾರ್ಯಕಾರಿ ಸಮಿತಿಯ ಅಧಿವೇಶನವನ್ನು ನೆರೆಯಿಸಿ–ಅದರ ಪ್ರಭಾವವನ್ನು, ಕಾರ್ಯವ್ಯಾಪ್ತಿಯನ್ನು ಬೆಳೆಸಬೇಕು ಎಂದು ಯೋಚಿಸಿ ನನ್ನ ತರುಣ ಗೆಳೆಯರೊಡನೆ ಪರಿಷತ್ತಿನಲ್ಲಿ ಗಲಭೆಯನ್ನು ಎಬ್ಬಿಸಿದೆ.

ಇದು 1934ರ ಸುಮಾರಿಗೆ. ಆದರೆ ಕನ್ನಡದಲ್ಲಿ ಪಂಡಿತನಲ್ಲದ, ಸಂಸ್ಕೃತದ ಅಧ್ಯಾಪಕನಾದ, 7–8 ನಾಟಕಗಳನ್ನು ಮಾತ್ರ ಬರೆದ ನನ್ನಂತಹ ತರುಣನ ಪ್ರಯತ್ನಕ್ಕೆ ಹಿರಿಯರ ಸಹಾನುಭೂತಿ ದೊರೆಯಲಿಲ್ಲ. ನಾಲ್ಕು ವರ್ಷ ಪ್ರಯತ್ನ ಮಾಡಿ, ನಿರಾಶಿತನಾಗಿ ಕೊನೆಗೆ ಪರಿಷತ್ತು–ಸಮ್ಮೇಳನಗಳಲ್ಲಿ ಆಸಕ್ತಿಯನ್ನು ಕಳೆದುಕೊಂಡು, ನನ್ನ ಆಕಾಂಕ್ಷೆಗಳನ್ನು ಸ್ಥಳೀಯವಾಗಿ ವಿದ್ಯಾವರ್ಧಕ ಸಂಘದ ಸಹಾಯದಿಂದ ಈಡೇರಿಸಿಕೊಳ್ಳಬಹುದೆಂದು, ಪೂರ್ತಿಯಾಗಿ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿಯೆ ದುಡಿಯಲು ಪ್ರಾರಂಭಿಸಿದೆ.

ನಾನು ಮತ್ತು ಕರ್ನಾಟಕ

ನನ್ನ ಮತ್ತು ವಿದ್ಯಾವರ್ಧಕ ಸಂಘದ ಸಂಬಂಧವನ್ನು ಸಮರ್ಪಕವಾಗಿ ಹೇಳುವುದಾದರೆ, ಧಾರವಾಡದಲ್ಲಿ ಒಂದೆಡೆ ಕಾಲೇಜು ನನಗೆ ಅತ್ತೆಯ ಮನೆಯಾಗಿದ್ದರೆ ಕರ್ನಾಟಕ ವಿದ್ಯಾವರ್ಧಕ ಸಂಘವು ತವರ್ಮನೆಯಾಗಿತ್ತು. ಉದರಾಶ್ರಯಕ್ಕಾಗಿ ಕಾಲೇಜಿನಲ್ಲಿ ದುಡಿಯುತ್ತಿದ್ದೆ; ಪೂರ್ತಿ ಸ್ವೇಚ್ಛೆ–ಸ್ವಾತಂತ್ರ್ಯಗಳಿಂದ ಸಂಘದಲ್ಲಿ ದುಡಿಯುತ್ತಿದ್ದೆ. ಯಾವುದೇ ಕೆಲಸವನ್ನು ಕೈಕೊಂಡಾಗ ಆದರ ಬಗ್ಗೆ ವಿಚಾರ ಮತ್ತು ನಿರ್ಣಯಗಳನ್ನು ಶೀಘ್ರವಾಗಿ ಮಾಡುತ್ತಿದ್ದೆ. ಈ ನನ್ನ ಸ್ವಭಾವ ವೈಶಿಷ್ಟಕ್ಕಾಗಿ ಯಾವುದೇ ಸಂಸ್ಥೆಯಲ್ಲಾಗಲಿ, ಸಮಿತಿಯಲ್ಲಾಗಲಿ ನನ್ನನ್ನು ತಪ್ಪು ತಿಳಿದುಕೊಳ್ಳುವವರ ಸಂಖ್ಯೆಯೆ ಹೆಚ್ಚಾಗಿತ್ತು. ನನ್ನ ನಿರ್ಣಯಗಳನ್ನು ಒತ್ತಾಯದಿಂದ ತಮ್ಮ ಮೇಲೆ ಹೇರುವೆನು ಎಂದು ಅವರ ಅಸಮಾಧಾನ (ಯಾಕೆಂದರೆ, ಅವರಿನ್ನೂ ನಿರ್ಣಯವನ್ನೆ ಮಾಡಿರಲಿಲ್ಲ). ಹೀಗೆ ವಿರೋಧಿಗಳು ಮತ್ತು ಅಸಂತುಷ್ಟ ಗೆಳೆಯರೆ ಹೆಚ್ಚಾಗಿದ್ದು ನನ್ನ ದುರ್ದೈವ ಎನ್ನಬಹುದಾದರೂ ಇದಕ್ಕೆ ಪ್ರತಿಯಾಗಿ ಪೂರ್ತಿ ನನ್ನ ಪ್ರಾಮಾಣಿಕತೆಯನ್ನೂ, ನಿರ್ಣಯವನ್ನೂ ಒಪ್ಪಿಕೊಳ್ಳುವ ಒಬ್ಬನಾದರೂ ನನಗೆ ಎಲ್ಲ ಕಡೆ ತಪ್ಪದೆ ದೊರೆತಿರುವುದು ನನ್ನ ಸುದೈವ. ಕಾಲೇಜಿನಲ್ಲಿ ಪ್ರೊ. ಸಾಸನೂರರಿದ್ದಂತೆ (ಇವರು ಬಹುಕಾಲ ಬದುಕಲಿಲ್ಲ), ಕ.ವಿ.ವ ಸಂಘದಲ್ಲಿ ಡಾ. ಕಾಂತೇಶ ಕಮಲಾಪುರ ಎನ್ನುವವರು.(ನನಗಿಂತ ವಯಸ್ಸಿನಿಂದ ಹಿರಿಯರಾದ ಇವರು ಇನ್ನೂ ಬದುಕಿದ್ದಾರೆಂಬುದನ್ನು ಇಲ್ಲಿ ಸಂತೋಷದಿಂದ ಕಾಣಿಸುತ್ತೇನೆ. ಇವರ ಪ್ರೋತ್ಸಾಹ ಮತ್ತು ಬೆಂಬಲ ನನ್ನಿಂದ ಅನೇಕ ಕೆಲಸಗಳನ್ನು ಮಾಡಲು ಪ್ರೇರಕವಾಯಿತು.) ನಾಡಹಬ್ಬ, ಸಾಹಿತ್ಯ

ಸಮ್ಮೇಳನ ಮುಂತಾದುವುಗಳನ್ನು ಏರ್ಪಡಿಸಿ ಸಂಘದಲ್ಲಿ ಜೀವಕಳೆಯನ್ನು ತುಂಬ ಲಾಯಿತು.

ಇದಕ್ಕೂ ಹೆಚ್ಚಿನದೆಂದರೆ ಸಾಹಿತ್ಯ ಪರಿಷತ್ತಿನ ಸಂದರ್ಭದಲ್ಲಿ ನಿರಾಶಿತ ನಾನು ಸಂಘವನ್ನು ಅಖಿಲ ಕರ್ನಾಟಕದ ಚಟುವಟಿಕೆಗಳ ಕೇಂದ್ರವನ್ನಾಗಿ ಮಾಡಬೇಕೆಂದು ಯತ್ನಿಸಿದ್ದು. ಈ ಯತ್ನದ ಫಲವಾಗಿಯೆ ಕರ್ನಾಟಕ ವಿಶ್ವವಿದ್ಯಾಲಯ ಚಳವಳಕ್ಕೆ ಸಂಘದಲ್ಲಿ ಜನ್ಮವನ್ನು ಕೊಟ್ಟದ್ದು. ಧಾರವಾಡದ ಜನತಾ ಕಾಲೇಜ್, ಬೆಳಗಾವಿಯ ಲಾ ಕಾಲೇಜ್ ಎರಡನ್ನು ಸ್ಥಾಪಿಸಿ, ಭೂಮಿರೆಡ್ಡಿ ಪಾಲಿಟೆಕ್ನಿಕ್ ಸಂಸ್ಥೆಗೆ ಎಂಜಿನೀಅರ್ ಕಾಲೇಜ್‌ದ ಬೀಜವನ್ನಾಗಿ ಮಾಡಿ, ಒಂದು ಒಕ್ಕಲುತನ (agriculture) ಕಾಲೇಜ್ ಸ್ಥಾಪನೆಗೆ ಸರಕಾರವನ್ನು ಒತ್ತಾಯಪಡಿಸಿ, ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯ ಚಳುವಳಿಯನ್ನು ಸಂಘದಿಂದ ಪ್ರಾರಂಭಿಸಲಾಯಿತು. ಸಂಘದ ವತಿಯಿಂದ ನಾನು ಬೆಳಗಾವಿಯಲ್ಲಿ ದಿ. ಆರ್. ಎ. ಜಾಗಿರದಾರರ ಅಧ್ಯಕ್ಷತೆಯಲ್ಲಿ ಒಂದು ವಿಶ್ವವಿದ್ಯಾಲಯ ಸಮ್ಮೇಳನವನ್ನು ಸೇರಿಸಿ, ಎಲ್ಲ ಪಕ್ಷ–ಎಲ್ಲ ಜಾತಿ-ಎಲ್ಲ ವರ್ಗಗಳ 12 ಪ್ರತಿನಿಧಿಗಳ ಒಂದು ಕ್ರಿಯಾಸಮಿತಿಯನ್ನು ಗೊತ್ತುಮಾಡಿದೆ. 1942ರ ಚಳವಳಿ ಪ್ರಾರಂಭವಾಯಿತು ನಮ್ಮ ಇಬ್ಬರು ಸದಸ್ಯರು (ಕಾಂಗ್ರೆಸ್ ಪಕ್ಷದವರು) ಭೂಗತರಾದರು. ಅವರೊಡನೆ ಕೊನೆಯವರೆಗೂ ಸಂಪರ್ಕವನ್ನು ಉಳಿಸಿಕೊಂಡು ವಿಶ್ವವಿದ್ಯಾಲಯ ಚಳವಳಿಯಿಂದ ಸಂಘಟನೆಯನ್ನು ಅವಿರತವಾಗಿ ಮುಂದೆ ನಡೆಸಿದೆ. (ನಮ್ಮ ಸಮ್ಮೇಳನದ ಅಧ್ಯಕ್ಷರೇ ಮುಂದೆ ಕರ್ನಾಟಕ ವಿಶ್ವವಿದ್ಯಾಲಯದ ಮೊದಲ ವೈಸ್‌ಚಾನ್ಸಲರರಾದರು).

ಇನ್ನೊಂದು ಸಂಘಟನೆ ಎಂದರೆ ವಾಚನಾಲಯಕ್ಕೆ ಸಂಬಂಧಿಸಿದ್ದು. ಅಂದಿನ ಮುಂಬಯಿ ಪ್ರಾಂತದ (ಕಾಂಗ್ರೆಸ್) ಸರಕಾರವು ಪ್ರಾಂತದಲ್ಲಿ ಮರಾಠಿ–ಗುಜರಾತಿ-ಕನ್ನಡ ಮೂರೂ ಭಾಷೆಗಳಿಗಾಗಿ ಮೂರು ಪ್ರಾದೇಶಿಕ ಗ್ರಂಥಾಲಯಗಳನ್ನು ಸ್ಥಾಪಿಸಲು ನಿರ್ಣಯಿಸಿತು. (ಅಂದಿನವರೆಗೆ ಕಾಯಿದೆಗನುಸಾರವಾಗಿ ಮುದ್ರಿತವಾದ ಗ್ರಂಥಗಳು ಸರ್ಕಾರಕ್ಕೆ ಉಚಿತವಾಗಿ ಸಲ್ಲುತಿದ್ದುವು. ಮೂರೂ ಭಾಷೆಗಳ ಗ್ರಂಥಗಳು ಒಂದೆಡೆ ಅನುಪಯುಕ್ತವಾಗಿ ಸಂಗ್ರಹದಲ್ಲಿ ಕೊಳೆಯುತ್ತಿದ್ದುವು. ಇವನ್ನೆ ಆಯಾ ಪ್ರದೇಶದಲ್ಲಿ ಗ್ರಂಥಾಲಯವಾಗಿ ಕಾಯ್ದುಕೊಳುವುದು ಮೂಲ ಉದ್ದೇಶವಾಗಿತ್ತು). ಗುಜರಾತಿ ಗ್ರಂಥಾಲಯವನ್ನು ಅಹಮ್ಮದಾಬಾದಿನಲ್ಲಿ, ಮರಾಠಿ ಗ್ರಂಥಾಲಯವನ್ನು ಪುಣೆಯಲ್ಲಿ ಸ್ಥಾಪಿಸುವುದಕ್ಕೆ ಅಲ್ಲಿಯ ನಾಗರಿಕರು ಮುಂದಾದರು. ಸರಕಾರವು ವರ್ಷಕ್ಕೆ ಹತ್ತು ಸಾವಿರ ಕೊಟ್ಟರೆ ಜನತೆಯು ಅಷ್ಟೆ ಹಣವನ್ನು ಕೊಡಬೇಕಾಗುತ್ತಿತ್ತು. ಗುಜರಾತವು ಧನವಂತರ ಪ್ರದೇಶ, ಮಹಾರಾಷ್ಟ್ರವು ವಿಶಾಲವಾದ ಪ್ರದೇಶ; ನಮ್ಮದು ಮಾತ್ರ ನಾಲ್ಕೇ ಜಿಲ್ಲೆಗಳ ಚಿಕ್ಕ ಪ್ರದೇಶ. ಧನವಂತರು ತೀರ ಕಡಿಮೆ; ಇದ್ದರೂ ಅಷ್ಟೊಂದು ಸಾಹಿತ್ಯ-ಸಂಸ್ಕೃತಿಗಳ ಪಕ್ಷಪಾತಿಗಳಲ್ಲ. ಹೀಗಾಗಿ ಕನ್ನಡ ಗ್ರಂಥಾಲಯವನ್ನು ಎಲ್ಲಿ, ಹೇಗೆ, ಯಾರು ಮುಂದಾಗಿ ಸ್ಥಾಪಿಸಬೇಕೆಂಬುದು ನಿರ್ಣಯಕ್ಕೆ ಮೀರಿದ

ವಿಷಯವಾಯ್ತು. ಈ ಯೋಜನೆಗಾಗಿ ನಿರ್ಮಿತವಾದ ವಾಚನಾಲಯ ಸಮಿತಿಯು ಧಾರವಾಡಕ್ಕೆ ಬಂದಾಗ, ಅವರನ್ನೂ ಕೆಲವು ಪ್ರಮುಖ ನಾಗರಿಕರನ್ನೂ ವಿದ್ಯಾವರ್ಧಕ ಸಂಘದಲ್ಲಿ ವಿಚಾರವಿನಿಮಯಕ್ಕಾಗಿ ಕೂಡಿಸಲಾಯಿತು. ವಿಚಾರ ವಿನಿಮಯವೇನೊ ಆಯಿತು, ಆದರೆ ಯಾರೂ ನಿರ್ಣಯದ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಸಿದ್ಧರಿರಲಿಲ್ಲ. ನನ್ನ ಸ್ವಭಾವದ ಬಗ್ಗೆ ಮೇಲೆಯೆ ಎಚ್ಚರಿಕೆಯನ್ನು ಕೊಟ್ಟಿದ್ದೇನಷ್ಟೆ? ಅದಕ್ಕನುಗುಣವಾಗಿ, ನಾನು ಎದ್ದು ನಿಂತು, ಯಾರನ್ನೂ ಕೇಳದೆ, ಯಾರೊಡನೆಯೂ ಮೊದಲು ಚರ್ಚಿಸದೆ 'ಕರ್ನಾಟಕ ಗ್ರಂಥಾಲಯದ ಹೊಣೆಯನ್ನು ವಿದ್ಯಾವರ್ಧಕ ಸಂಘದ ಪತಿಯಿಂದ ವಹಿಸಿಕೊಳ್ಳಲು ನಾವು ಸಿದ್ಧ ? ಎಂದು ಹೇಳಿ ಕುಳಿತುಬಿಟ್ಟೆ. ವಾಚನಾಲಯ ಸಮಿತಿಯ ಸದಸ್ಯರ ಭಾರ ಇಳಿಯಿತು. ಆದರೆ ಮರುದಿನದಿಂದ ಸಂಘದಲ್ಲಿಯ ಸಹ ಕಾರ್ಯಕರ್ತರು ನನ್ನ ತಲೆಯನ್ನು ಕುಕ್ಕತೊಡಗಿದರು. 'ಸಂಘದಲ್ಲಿ ಒಂದುದುಡ್ಡು ಇಲ್ಲ. ವರ್ಷಕ್ಕೆ ಹತ್ತುಸಾವಿರ ಕೂಡಿಸುವವರು ಯಾರು? ಅದನ್ನ ಕೊಡು ವವರು ಯಾರು ? ಮುಂಚೆ ಒಂದು ಮಾತನ್ನು ನಮಗೆ ಕೇಳಬಾರದಾಗಿತ್ತೆ ?' ಎಂದು ಮುಂತಾಗಿ ನನಗೆ ಬುದ್ಧಿ ಹೇಳತೊಡಗಿದರು. 'ಮುಂಚೆ ಕೇಳಿದ್ದರೆ ನೀವು ಒಪ್ಪುತ್ತಿದ್ದಿಲ್ಲ, ಅದಕ್ಕೆ ನಿಮ್ಮನ್ನ ಕೇಳಲಿಲ್ಲ'. ಈಗ ಬಹಿರಂಗವಾಗಿ ಜವಾಬ್ದಾರಿಯನ್ನು ಹೊತ್ತಿವಲ್ಲ ? ಇನ್ನು ಮೇಲೆ ವಿರಾಮವಾಗಿ ವಿಚಾರ ಮಾಡೋಣ ಎಂದೆ. ಗೆಳೆಯರ ಮಾತಿನಲ್ಲಿ ತಥ್ಯವಿದ್ದಿತು ಎಂಬುದು ನನಗೆ ಹೊಳೆಯಿತು. ಈ ಕೆಲಸ ಸುಲಭವಲ್ಲ ಎಂಬುದರ ಅರಿವೂ ಆಯಿತು. ಆದರೆ 'ಧಾರವಾಡದ ವಿದ್ಯಾವರ್ಧಕ ಸಂಘವು ಆಸಡ್ಡೆಯನ್ನು ತೋರಿಸಿದ್ದರೆ ಕರ್ನಾಟಕ ಗ್ರಂಥಾಲಯ ಗತಿಗೇಡಾಗುತ್ತಿತ್ತು, ಮುಂಬಯಿ ಪ್ರಾಂತದ ಕನ್ನಡಿಗರು ಅವಹೇಳನೆಗೆ ಗುರಿಯಾಗುತ್ತಿದ್ದರು ಅದನ್ನು ತಪ್ಪಿಸಿದೆವಲ್ಲ' ಎಂಬ ಸಮಾಧಾನ ನನಗೆ.

ಗ್ರಂಥಾಲಯದ ನಿರ್ಣಯವನ್ನು ಕೈಕೊಂಡ ಮೇಲೆ ಜನತೆಯಲ್ಲಿ ಆ ಬಗ್ಗೆ ಜಾಗೃತಿಯನ್ನೂ, ಅಭಿಮಾನವನ್ನೂ ಮೂಡಿಸುವುದಕ್ಕೆ ವಿದ್ಯಾವರ್ಧಕ ಸಂಘದ ಪತಿಯಿಂದ ವಾಚನಾಲಯ ಚಳುವಳವನ್ನು ಪ್ರಾರಂಭಿಸಿದೆವು. ನನಗೆ ನೆನಪಿದ್ದ ಮಟ್ಟಿಗೆ ಕೆಲವು ನಗರಗಳಲ್ಲಿ, ವಿಶೇಷವಾಗಿ ಅನೇಕ ವರ್ಷಗಳಿಂದ ಸಾರ್ವಜನಿಕ ವಾಚನಾಲಯಗಳಿದ್ದ ಸ್ಥಳಗಳಲ್ಲಿ, ವಾಚನಾಲಯ ಸಂಘಗಳನ್ನು ಸ್ಥಾಪಿಸಿದೆವು. ಇದಕ್ಕಿಂತ ಮುಖ್ಯವಾದುದೆಂದರೆ ಜಿಲ್ಲಾ ವಾಚನಾಲಯ ಸಮ್ಮೇಳನಗಳನ್ನು ಏರ್ಪಡಿಸಿದೆವು.

ನನಗೆ ತಿಳಿದಮಟ್ಟಿಗೆ ಇಂತಹ ಚಳವಳ ಮತ್ತು ಇಂತಹ ಸಮ್ಮೇಳನ ಇವನ್ನು ವಿದ್ಯಾವರ್ಧಕ ಸಂಘವೆ ಮೊದಲ ಸಲ ಏರ್ಪಡಿಸಿದ್ದು ಎಂದು ಹೇಳಬಹುದು (ಎಂದರೆ ಒಂದು ಉದ್ದೇಶಕ್ಕಾಗಿ ಸಂಘಟಿತ ಯತ್ನವಾಗಿ).

ನಾನು ಮತ್ತು ಏಕೀಕರಣ

1931 ರಲ್ಲಿ ಗಾಂಧಿಜಿಯವರು ದುಂಡುಮೇಜಿನ ಪರಿಷತ್ತಿನಿಂದ ತಿರುಗಿ ಬಂದೊಡನೆ ಅವರನ್ನು ಬಂಧಿಸಿ ಸರಕಾರವು ದಬ್ಬಾಳಿಕೆಯನ್ನು ಪ್ರಾರಂಭಿಸಿತು. ವಾಡಿಕೆಯಂತೆ ಕಾಂಗ್ರೆಸ್ ಸಂಸ್ಥೆ 'ಅಕ್ರಮ' ಎಂದು ಸಾರಲ್ಪಟ್ಟಿತು. ಆ ಸಂಸ್ಥೆಯ ಕಚೇರಿಯನ್ನು ಪೋಲೀಸರು ಶೋಧಮಾಡುವ ಮುಂಚಿತ ಕಾಗದಪತ್ರಗಳನ್ನು ಎಲ್ಲಿಡಬೇಕೆಂದು ಯೋಚನೆಯಲ್ಲಿ ಯಾರೊ ಒಬ್ಬ ರಾಜಕೀಯ ಮಿತ್ರರು ಅವನ್ನು ನನ್ನ ಮನೆಯಲ್ಲಿ ತಂದಿಟ್ಟರು, ಸೈಕ್ಲೊಸ್ಟೈಲ್ ಯಂತ್ರಸಹಿತ. ರಾತ್ರಿ ಬುಲೆಟಿನ್ ಬರೆದು ಹಂಚಿಸುವ ಜವಾಬ್ದಾರಿ ನನ್ನದು. 1942ರ ಚಳವಳದ ಬಗ್ಗೆ ಈ ಮುಂಚಿತ ಹೇಳಿದ್ದೇನೆ. ಇದನ್ನೆಲ್ಲ ಹೇಳುವ ಕಾರಣವೆಂದರೆ ಧಾರವಾಡಕ್ಕೆ ಹೋದ 5–6 ವರ್ಷಗಳಲ್ಲಿ ನನಗೆ ಅನೇಕ ರಾಜಕೀಯ ಮುಖಂಡರ ಪರಿಚಯವಾಯಿತು. ಆ ಕಾಂಗ್ರೆಸಿಗರಲ್ಲಿ ದಿ|| ಮಂಗಳವೇಢೆ ಶ್ರೀನಿವಾಸರಾಯರು ನನಗೆ ಅತ್ಯಂತ ಆಪ್ತ, ಮಿತ್ರರಾದರು, ಏಕೀಕರಣದ ವಿಷಯ ಎಂದಿನಿಂದಲು, ಅವರ ಉಸಿರಿನಂತಾಗಿತ್ತು. ಅವರನ್ನು ದೂರದಿಂದ ನೋಡಿದೊಡನೆ ನನ್ನ ಚಿಕ್ಕಮಕ್ಕಳು 'ಏಕೀಕರಣ ಬರ್‍ತಿದೆ ನಮ್ಮ ಮನೆಗೆ' ಎಂದು ಹೇಳುತ್ತಿದ್ದರು. ಈ ಪರಿ ಏಕೀಕರಣದಿಂದ ತಲೆಯನ್ನು ತುಂಬಿಕೊಂಡರೂ ಪ್ರತಿಯೊಂದು ಕಾಂಗ್ರೆಸ್ ಚಳವಳದಲ್ಲಿ ಸೇರಿ ಜೇಲಿಗೆ ಹೋಗುತ್ತಿದ್ದರು.

ಇಂತಹವರು 1944ರ ನವೆಂಬರ್ (ಕೊನೆಯ ವಾರದಲ್ಲಿರಬಹುದು) ಒಂದು ಸಾಯಂಕಾಲ ವಿದ್ಯಾವರ್ಧಕ ಸಂಘದಲ್ಲಿ ಕುಳಿತ ನನ್ನ ಕಡೆ ಬಂದು 'ನಿಮ್ಮಲ್ಲಿ ಒಂದು ವಿನಂತಿ. ಆದಷ್ಟು ಬೇಗ ಸಂಘದ ವತಿಯಿಂದ ಏಕೀಕರಣ ಸಮ್ಮೇಳನವನ್ನು ಸೇರಿಸಿ ಅಖಿಲ ಕರ್ನಾಟಕ ಏಕೀಕರಣ ಸಂಘಕ್ಕೆ ಪುನರ್ಜೀವ ಕೊಡಿರಿ!' ಎಂದರು. ನಾನು ತಮಾಷೆಯ ದನಿಯಲ್ಲಿಯೆ ಹೇಳಿದೆ 'ಕಾಂಗ್ರೆಸ್ ಚಳವಳ ಇಲ್ಲದಾಗ ನಿಮಗೆ ಹೊತ್ತು ಹೋಗಲು ಒಂದು ನಿಮಿತ್ತವಲ್ಲವೆ ಏಕೀಕರಣ ?' ಎಂದು. 'ಇಲ್ಲ ಜಾಗಿರದಾರರೆ, ಕಾಂಗ್ರೆಸ್ ಚಳವಳ ಮುಗಿದ್ಹಾಂಗೇ. (ಆಗ ಸಿಮ್ಲಾ ಪರಿಷತ್ತು ಸೇರಿತ್ತು. ಎಲ್ಲ ಮುಂದಾಳುಗಳ ಬಿಡುಗಡೆಯಾಗಿತ್ತು. ಹಾಗಾಗಿಯೆ ಶ್ರೀನಿವಾಸರಾಯರಿಗೆ ಬಿಡುವು ದೊರೆತಿತ್ತು). ಇನ್ನು ಸ್ವರಾಜ್ಯ ಬರುವುದು ಖಂಡಿತ. ಆದಕ್ಕಾಗಿ ಕರ್ನಾಟಕದ ಹಿತದ ಪ್ರಶ್ನದ ಬಗ್ಗೆ ಯೋಚನೆ ಮಾಡಲೇಬೇಕು. 1945 ರ ಮಾರ್ಚ ತಿಂಗಳಿನ ವರೆಗೆ ಸಮ್ಮೇಳನವನ್ನು ಸೇರಿಸಬಹುದೆ ?' ಎಂದರು. 'ಅಷ್ಟು ದೂರಯಾಕೆ ? ಮುಂದಿನ ತಿಂಗಳ (ಡಿಸೆಂಬರ್) ಕೊನೆಯ ವಾರದಲ್ಲಿಯೆ ಸೇರಿಸಬಹುದು' ಎಂದೆ. ಅಷ್ಟು ಬೇಗ ಹೇಗೆ ಶಕ್ಯ ಎಂದು ಅವರು ಚಕಿತರಾದರು. ಆದರೆ ಕೆಲವು ವರ್ಷಗಳಿಂದ ಸಂಘವು ಹೇಗೆ ಸಂಘಟಿತವಾಗಿತ್ತು ಎಂಬುದರ ಆತ್ಮವಿಶ್ವಾಸ ನನಗಿದ್ದಿತು, ಅವರಿಗಿದ್ದಿರಲಿಲ್ಲ.

ಅಂತೂ ಡಿಸೆಂಬರ್ ಕೊನೆಯ ವಾರದಲ್ಲಿ ದಿವಂಗತ ಜಿನರಾಜ ಹೆಗಡೆ ಅವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಸೇರಿತು. ಕರ್ನಾಟಕದ, ಕನ್ನಡ ಭಾಷೆಯ ಎಲ್ಲ ಜಿಲ್ಲೆ

ಗಳಿಂದ ಇಬ್ಬರಂತೆ ಪ್ರತಿನಿಧಿಗಳು ಸೇರಿದರು. ಕೂಲಂಕಷ ಚರ್ಚೆಯಾಯಿತು. ಏಕೀಕೃತ ಕರ್ನಾಟಕದ ಪ್ರದೇಶವನ್ನು, ಮೇರೆಗಳನ್ನು ಗೊತ್ತುಪಡಿಸಲಾಯಿತು. ಒಂದು ಕಾರ್ಯಕಾರಿ ಸಭೆ ಜಿನರಾಜರ ಅಧ್ಯಕ್ಷತೆಯಲ್ಲಿ ಚುನಾಯಿಸಲ್ಪಟ್ಟಿತು. ನಾನು ಸರಕಾರೀ ನೌಕರ ಎಂದು ಹಟದಿಂದ ಹೇಳಿದರೂ ಅಷ್ಟೆ ಹಟದಿಂದ ನನ್ನನ್ನು ಉಪಾಧ್ಯಕ್ಷನನ್ನಾಗಿ ಆರಿಸಿ, ಕಚೇರಿಯನ್ನೂ ಚಳವಳಿಯನ್ನು ವ್ಯವಸ್ಥೆಗೊಳಿಸುವ ಭಾರವನ್ನು ನನ್ನ ಮೇಲೆ ಹೊರಿಸಲಾಯಿತು. ಏಕೀಕರಣದ ಕಚೇರಿಯೂ ಸಂಘದಲ್ಲಿಯೆ.

ಆದರೆ ಇದಕ್ಕೆಲ್ಲ ಹಣ ಬೇಕಲ್ಲ? ನಿಧಿಸಂಗ್ರಹದ ಜಾಣ್ಮೆಯಾಗಲಿ ಯೋಗ್ಯತೆಯಾಗಲಿ ಎಂದೂ ನನಗಿದ್ದಿರಲಿಲ್ಲ. ಆದುದರಿದ ತಾತ್ಕಾಲಿಕವಾಗಿ ಕೆಲವು ಸ್ನೇಹಿತರಿಂದ ಪತ್ರ ವ್ಯವಹಾರದ ಮಟ್ಟಿಗೆ ಹಣವನ್ನು ಕೂಡಿಸಿ ಕಚೇರಿಯ ಚಟುವಟಿಕೆಯನ್ನು ಪ್ರಾರಂಭಿಸಿದೆವು.

ಆಗ ನಮಗಿದ್ದ ಮುಖ್ಯ ತೊಂದರೆ ಎಂದರೆ ಅಂದು ದೇಶೀಯ ಸಂಸ್ಥಾನ ಎನ್ನಿಸಿಕೊಳುತ್ತಿದ್ದ ಮೈಸೂರಿನ ವಿಷಯ. ಈ ಸಂಸ್ಥಾನಗಳ ವಿಲೀನೀಕರಣದ ಬಗ್ಗೆ ಕಾಂಗ್ರೆಸು ಇನ್ನೂ ನಿಶ್ಚಿತ ಧೋರಣೆಯನ್ನು ಸ್ವೀಕರಿಸಿದ್ದಿಲ್ಲವಾದ್ದರಿಂದ ನಮ್ಮ ಕಾಂಗ್ರೆಸ್ ಮಿತ್ರರು ಆ ಬಗ್ಗೆ ಏನನ್ನೂ ಹೇಳಲು ಸಿದ್ಧರಿರಲಿಲ್ಲ. ಆದರೆ ಕಾಂಗ್ರೆಸಿನ ಶಿಸ್ತಿಗೆ ಅಧೀನರಾಗದೆ ಇದ್ದ ನನ್ನಂತಹ ಕೆಲವರೂ ಇದ್ದರು. ಅವರೆಲ್ಲರೂ ಮೈಸೂರನ್ನು ಕರ್ನಾಟಕದಲ್ಲಿ ಸೇರಿಸಲೇಬೇಕು ಎಂಬ ಅಭಿಪ್ರಾಯ ತಳೆದಿದ್ದರು. ಅಂದು ಮೈಸೂರಿನ ಕೆಲವು ರಾಜಕಾರಣಿಗಳು ಕಾಂಗ್ರೆಸ್ ಸಂಸ್ಥೆಯ ಹಿರಿತನವನ್ನು ಒಪ್ಪಿಕೊಳ್ಳುವಾಗಲೂ ಅವರಿಗೆ ಮೈಸೂರಿನ ಬಗ್ಗೆ, ಮಹಾರಾಜರ ಬಗ್ಗೆ ಅತ್ಯಂತ ನಿಷ್ಠೆ ಇದ್ದಿತು. ಹೀಗಾಗಿ ಕೆಲ ಕಾಂಗ್ರೆಸಿಗರು ಮಹಾರಾಜರ ಪ್ರಭುತ್ವದಲ್ಲಿ ಕರ್ನಾಟಕ ಏಕೀಕೃತವಾಗಲು ಅಡ್ಡಿ ಇಲ್ಲ ಎಂಬ ಹಾವೇರಿ ನ್ಯಾಯದಿಂದ ಸಮಾಧಾನ ತಂದುಕೊಂಡರು. ಆದರೆ ಬ್ರಿಟಿಶ ಪ್ರದೇಶದಲ್ಲಿನ ನಮ್ಮಂತಹ ಕೆಲವರಿಗೆ 'ಮಹಾರಾಜ' ಎಂಬ ಪದ್ಧತಿ ಸುತರಾಂ ಒಪ್ಪಿಗೆ ಇರಲಿಲ್ಲ. ಆದರೂ ಆಗ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಬದಲಾಯಿಸುವ ಪರಿಸ್ಥಿತಿಗಾಗಿ ಕಾಯುವುದೊಳ್ಳೆಯದು ಎಂದು ನಿರ್ಣಯಿಸಲಾಯಿತು.

ಹೀಗಿರುವಾಗ ಮೈಸೂರಿನಲ್ಲಿಯೆ ಕೆಲವು ರಾಜಕೀಯ ತರುಣ ಮುಂದಾಳುಗಳು ಏಕೀಕೃತ ಕರ್ನಾಟಕವನ್ನು ಬಯಸುತ್ತಾರೆಂಬುದು ತಿಳಿಯಿತು. ದಿವಂಗತರಾದ ಕೆ. ಸಿ. ರೆಡ್ಡಿ ಮತ್ತು ಕೆಂಗಲ್ ಹನುಮಂತಪ್ಪ ಇವರು ಆ ತರುಣರಲ್ಲಿ ಮುಖ್ಯರಾಗಿದ್ದರು. ಈ ಕಾರಣಕ್ಕಾಗಿ 1946ರಲ್ಲಿ ಏಕೀಕರಣ ಮಹಾಸಭೆ (Convention) ಎಂಬ ಹೆಸರಿನಿಂದ ಮೈಸೂರಿಗೆ ಸೇರಿದ ದಾವಣಗೆರೆಯಲ್ಲಿ ಸಮ್ಮೇಳನವನ್ನು ಸೇರಿಸಿದೆವು. ಡಾ॥ ರಾಮಕೃಷ್ಣ ಕಾರಂತರು ಅಧ್ಯಕ್ಷರು. ಅಲ್ಲಿ ಮೈಸೂರಿನ ಆ ಇಬ್ಬರು ತರುಣರಿಗೆ ಮಾತನಾಡಲು ಅವಕಾಶವನ್ನು ಕೊಡಲಾಯಿತು. ಅದನ್ನು ಕೇಳಿ ಮೈಸೂರನ್ನು

ಕೈಬಿಡುವುದು ಮೈಸೂರ ಕನ್ನಡಿಗರಿಗೆ ಅನ್ಯಾಯ ಎನ್ನುವ ವಾತಾವರಣ ನಿರ್ಮಿತ ವಾಯಿತು. ಆದರೂ ನಮ್ಮ ಕಾಂಗ್ರೆಸ್ ನಿಷ್ಠಾವಂತರ ಸಮಾಧಾನಕ್ಕಾಗಿ 'ಶಕ್ಯ ವಾದಷ್ಟು ಮೈಸೂರನ್ನು ಸೇರಿಸಿ, ಶಕ್ಯವಾಗದಿದ್ದರೆ ಮೈಸೂರನ್ನು ಬಿಟ್ಟು' ಎಂಬ ಮಾತನ್ನು ಗೊತ್ತುವಳಿಯಲ್ಲಿ ಸೇರಿಸಿ ಶಕ್ಯಾಶಕ್ಯತೆಯ ಜವಾಬ್ದಾರಿಯನ್ನು ಮೈಸೂರಿನವರಿಗೇ ಬಿಡಲಾಯಿತು.

ಈ ಗೊತ್ತುವಳಿಯ ಪ್ರಸಾರಕ್ಕಾಗಿ ಜಿಲ್ಲೆ ಜಿಲ್ಲೆಗೂ ಜಿಲ್ಲಾ ಏಕೀಕರಣ ಸಮ್ಮೇಳನವನ್ನು ನಡೆಸಲಾಯಿತು. ನಾಡಹಬ್ಬದ ಆಮಂತ್ರಣವನ್ನು ಸ್ವೀಕರಿಸುವಾಗ ಏಕೀಕರಣ ಚಳವಳಕ್ಕಾಗಿ ನಿಧಿಯನ್ನು ಕೊಟ್ಟರೆ ಬರುವೆ ಎಂದು, ಆಯಾ ಸಮ್ಮೇಳನಗಳಲ್ಲಿ ಬಹಿರಂಗವಾಗಿ ಭಿಕ್ಷೆಯನ್ನು ಬೇಡಿ ಅಷ್ಟಷ್ಟು ಹಣವನ್ನು ಕೂಡಿಸತೊಡಗಿದೆ. ಕೆಲವೆಡೆ ತೀರ ಪರಿಚಿತರೂ ಧನವಂತರೂ ಆದ ಮಿತ್ರರಿಂದ ಹೆಚ್ಚು ಹಣವನ್ನು ಪಡೆಯುತ್ತಿದ್ದೆವು.

ಈ ಚಳವಳವು ಮುಂಬಯಿಯಲ್ಲಿ ಸೇರಿಸಿದ ಏಕೀಕರಣ ಸಮ್ಮೇಳನದಲ್ಲಿ ಪರಾಕಾಷ್ಠೆಯನ್ನೇ ಮುಟ್ಟಿತು. ಮುಂಬಯಿ ಮುಖ್ಯಮಂತ್ರಿಗಳಾದ ದಿ|| ಬಾಳಾ ಸಾಹೇಬ ಖೇರ (ಇವರು ಮೂಲತಃ ಕನ್ನಡಿಗರು) ಇವರನ್ನು ಅಧ್ಯಕ್ಷರನ್ನಾಗಿ ಆರಿಸಿ, ಸರದಾರ ವಲ್ಲಭಭಾಯಿ ಪಟೇಲ ಆವರಿಂದ ಉದ್ಘಾಟನೆಯನ್ನು ಮಾಡಿಸಲಾಯಿತು. ನಾವು ಸಂಗ್ರಹಿಸಿ ಕೊಟ್ಟ ವಿವರಗಳನ್ನೂ, ಪ್ರಕಟಿಸಿದ ಪ್ರಚಾರ ಪುಸ್ತಿಕೆಯನ್ನೂ ಓದಿ, 'ಸ್ವಾತಂತ್ರ್ಯ ಬಂದ ತರುವಾಯ ಪ್ರಾಂತ ಪುನರ್ರಚನೆಯಾಗುವಾಗ ಏಕೀಕೃತ ಕರ್ನಾಟಕಕ್ಕೆ ಪ್ರಾಶಸ್ತ್ಯವನ್ನು ಕೊಡಬೇಕೆಂದು ನನ್ನ ದೃಢವಾದ ಅಭಿಪ್ರಾಯವಾಗಿದೆ' ಎಂದು ಸರದಾರ ಪಟೇಲರು ತಮ್ಮ ಭಾಷಣದಲ್ಲಿ ಸಾರಿದರು.

ನಾವು ಸಮಾಧಾನದಿಂದ ಉಸುರ್ಗರೆದೆವು. ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯಲ್ಲಿ ಈ ವಿಷಯ ಹೇಗೆ ಬೆಳೆಯಿತು ಮುಂತಾದ ವಿವರಗಳನ್ನು ನನ್ನ 'ಆತ್ಮಜಿಜ್ಞಾಸೆ'ಯಲ್ಲಿ ಕಾಣಿಸಿದ್ದರಿಂದ ಇಲ್ಲಿ ಮತ್ತೆ ಹೇಳಬಯಸುವುದಿಲ್ಲ

ಒಟ್ಟು ಸಾರ್ವಜನಿಕ ಜೀವನದ ನನ್ನ ಅನುಭವದಲ್ಲಿ, ಅನೇಕ 'ಮುಂದಾಳು'ಗಳ, 'ದೊಡ್ಡವ್ಯಕ್ತಿ'ಗಳ ಪರಿಚಯದಿಂದ ನನಗೆ ನನ್ನ ನಾಟಕ ಲೇಖನಕ್ಕೆ ಪುಟವು ದೊರಕಿದುದೊಂದು ದೊಡ್ಡ ಲಾಭ ಎಂದು ತಿಳಿದು ನನ್ನ ಈ ವಿಷಯವನ್ನು ಮುಗಿಸುತ್ತೇನೆ.

ಎಪ್ಪತ್ತರ ದಶಕದಲ್ಲಾದ ಅವನತಿ

ಕಡ್ಡಾಯ ಪ್ರಾಥಮಿಕ ಶಿಕ್ಷಣ ಇತ್ತೀಚಿನವರೆಗೂ ರಾಜ್ಯ ಸರ್ಕಾರಗಳ ಜವಾಬ್ದಾರಿಯಾಗಿತ್ತು. ಈಗ ಅದರ ಜವಾಬ್ದಾರಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಮೇಲಿದೆ. 1950ರಲ್ಲಿ ನಮ್ಮ ಸಂಘಟನೆಯ 45ನೇ ವಿಧಿಯ ಪ್ರಕಾರ ದೇಶದ ಎಲ್ಲಾ ಶಾಲಾ ವಯಸ್ಸಿನ ಅಂದರೆ 6 ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸುವ ಜವಾಬ್ದಾರಿ ಸರ್ಕಾರಕ್ಕೆ ವಹಿಸಲ್ಪಟ್ಟಿತ್ತು. ಅಷ್ಟೇ ಅಲ್ಲದೆ ಸಂಘಟನೆಯ ದಿನಾಂಕದಿಂದ ಹತ್ತು ವರ್ಷಗಳೊಳಗಾಗಿ ಈ ಕಾರ್ಯವಾಗಬೇಕೆಂಬ ನಿರ್ದೇಶವನ್ನೀಯಲಾಗಿತ್ತು. ಆದರೆ ಅನೇಕ ರಾಜ್ಯಗಳಲ್ಲಿ ಈ ಕಾಲಾವಧಿಯ ಒಳಗೆ ಕಡ್ಡಾಯ ಶಿಕ್ಷಣ ಕಾಯಿದೆಗಳನ್ನು ಜಾರಿಗೆ ತರಲಾಗಲಿಲ್ಲ. ಇಂತಹ ರಾಜ್ಯಗಳಲ್ಲಿ ಕರ್ನಾಟಕವೂ ಸಹ ಸೇರಿದೆ. ಕರ್ನಾಟಕದ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆಯು 1961ರಲ್ಲಿ ಜಾರಿಗೆ ಬಂದಿತು. ಅಲ್ಲದೆ ಈ ಕಾಯಿದೆಯ ವ್ಯಾಪ್ತಿಯು ಕೇವಲ 6 ರಿಂದ 10 ವರ್ಷ ವಯಸ್ಸಿನ ಮಕ್ಕಳಿಗೆ ಮಾತ್ರ ಸೀಮಿತವಾಗಿ ಇಂದೂ ಸಹ ಆ ವಯಸ್ಸಿನ ಮಕ್ಕಳಿಗೆ ಮಾತ್ರ ಅನ್ವಯವಾಗುತ್ತದೆ. ಪ್ರಾರಂಭದ 60ರ ದಶಕದಲ್ಲಿ

ಕರ್ನಾಟಕದಲ್ಲಿ ಕಡ್ಡಾಯ ಶಿಕ್ಷಣ

ಸಿ. ಎಸ್. ನಾಗರಾಜು

---

6 ರಿಂದ 10 ವರ್ಷ ವಯಸ್ಸಿನ ಮಕ್ಕಳ ಶಾಲಾ ನೊಂದಾವಣೆ ಬಹಳ ವೇಗದಲ್ಲಿ ಹೆಚ್ಚುತ್ತಾ ಹೋಯಿತೆಂದು ಸಂಬಂಧಪಟ್ಟ ಸರ್ಕಾರಿ ಅಂಕಿ ಅಂಶ ಪ್ರಕಟನೆಗಳಿಂದ ಕಂಡುಬರುತ್ತದೆ. ನಾವೀಗ 6 ರಿಂದ 10 ವರ್ಷ ವಯಸ್ಸಿನ ಶಿಕ್ಷಣದ ಬದಲಾಗಿ 6 ರಿಂದ 11 ವರ್ಷ ವಯಸ್ಸಿನ ಮಕ್ಕಳನ್ನು ಕುರಿತು ವಿಚಾರ ಮಾಡೋಣ. ಅಂತರ ರಾಜ್ಯ ಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣ ಪ್ರಗತಿಯನ್ನು ಚರ್ಚಿಸಲು ಕೇಂದ್ರ ಸರ್ಕಾರದ ಅಂಕಿ ಅಂಶ ಪ್ರಕಟನೆಗಳು ಹಾಗೂ ಇನ್ನಿತರ ಸಂಸ್ಥೆಗಳಿಂದ ಮಾಡಲ್ಪಟ್ಟ ಪರಿವೀಕ್ಷಣೆಗಳು 6 ರಿಂದ 11 ವರ್ಷ ವಯೋಮಿತಿಯನ್ನು ಆಧಾರವಾಗಿಟ್ಟುಕೊಂಡಿವೆ. ಆದುದರಿಂದ ಕರ್ನಾಟಕದ ಪ್ರಗತಿಯ ಮೇಲೆ ಕ್ಷ–ಕಿರಣ ಬೀರಲು 6 ರಿಂದ 11 ವರ್ಷ ವಯಸ್ಸಿನ ಮಕ್ಕಳ ಶಿಕ್ಷಣದ ಪ್ರಗತಿಯು ಹೆಚ್ಚು ಸಮಂಜಸ. ಈ ಲೇಖನದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಪ್ರಗತಿಯನ್ನು ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಈ ವಿಶ್ಲೇಷಣೆಯನ್ನು 70ರ ದಶಕದ ಅಂಕಿ ಅಂಶಗಳನ್ನು ಆಧಾರದ ಮೇಲೆ ಮಾಡಲಾಗಿದೆ.

ಪ್ರಾಥಮಿಕ ಶಿಕ್ಷಣದ ಅಂಕಿ ಅಂಶಗಳ ಗೊಂದಲ

ಶೈಕ್ಷಣಿಕ ಪ್ರಗತಿಯ ಅಂಕಿ ಅಂಶಗಳು ಬಹಳ ಗೊಂದಲಮಯವಾಗಿದೆ. ರಾಜ್ಯ ಸರ್ಕಾರದವರು ಮಾಡುವ ಅಂಕಿ ಅಂಶಗಳ ವರದಿಗಳು ತಾಳೆಯಾಗುವುದಿಲ್ಲ. ಇದನ್ನು ಕುರಿತು ಗಮನಹರಿಸೋಣ. ರಾಜ್ಯ ಮಟ್ಟದ ಶೈಕ್ಷಣಿಕ ಸಂಶೋಧನೆಯ ಪ್ರಕಾರ 1968–69ರಲ್ಲಿ ರಾಜ್ಯದಲ್ಲಿರುವ 6 ರಿಂದ 11 ವರ್ಷ ವಯಸ್ಸಿನ ಮಕ್ಕಳಲ್ಲಿ ಶೇ 93 ಭಾಗ ಶಾಲೆಯಲ್ಲಿ ನೊಂದಾವಣೆಯಾಗಿದ್ದರು ಎಂದು ವರದಿಯಾಗಿದೆ. (ಪ್ರೊ. ಎ.ಸಿ. ದೇವೇಗೌಡ ಮತ್ತು ಟಿ. ಪರಮೇಶ್ವರನ್–ಪ್ರೋಗ್ರೆಸ್ ಆಫ್ ಎಜುಕೇಷನ್ ಇನ್ ಕರ್ನಾಟಕ ಪುಟ 44). ಆದರೆ 1978–79ರಲ್ಲಿ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯವರು ಹೊರಡಿಸಿರುವ ವರದಿಯಲ್ಲಿ, ಶೇ. 91 ಭಾಗ ಶಾಲೆಯಲ್ಲಿ ಸೇರಿದ್ದರು ಎಂದು ಸೂಚಿಸಲಾಗಿದೆ. ಮತ್ತೊಂದು ವಿಚಿತ್ರ ಸಂಗತಿಯೆಂದರೆ 6 ರಿಂದ 11 ವರ್ಷ ವಯಸ್ಸಿನ ಬಾಲಕರ ಜನಸಂಖ್ಯೆಗೆ ಹೋಲಿಸಿದರೆ ಶೇ. 100ಕ್ಕಿಂತಲೂ ಹೆಚ್ಚಿತ್ತೆಂದು ವರದಿಯಾಗಿದೆ. ಈ ಸಂಗತಿಯನ್ನು ಪರಿಶೀಲಿಸುವ ಮುನ್ನ, 1968-69ರಿಂದ 1978–79ರ ಒಳಗೆ ರಾಜ್ಯಗಳ ಪ್ರಾಥಮಿಕ ಶಿಕ್ಷಣದ ನೊಂದಾವಣೆಯ ಮಾದರಿಯನ್ನು ಕುರಿತು ಕೇಂದ್ರ ಸರ್ಕಾರದ ಅಂಕಿ ಅಂಶಗಳನ್ನು ಗಮನಿಸೋಣ. ಈ ವರದಿಯ ಪ್ರಕಾರ ಕರ್ನಾಟಕದಲ್ಲಿ 1968–69ರಲ್ಲಿ 6ರಿಂದ 11 ವರ್ಷ ವಯಸ್ಸಿನ ಜನಸಂಖ್ಯೆಯ ಶಾಲೆಯಲ್ಲಿ 1ರಿಂದ 5ನೆ ತರಗತಿಯಲ್ಲಿ ಸೇರಿದ್ದರು ಮಕ್ಕಳ ಸಂಖ್ಯೆ ಶೇ. 87 ರಷ್ಟಿತ್ತು. ಈ ಶೇಕಡ ಪ್ರಮಾಣ 1978–79ರಲ್ಲಿ ಶೇ. 81 ರಷ್ಟಿತ್ತು. ಸರ್ಕಾರದ ಅಂಕಿ ಅಂಶಗಳಿಗೂ ಕೇಂದ್ರ ಸರ್ಕಾರದ ಅಂಕಿ ಅಂಶಗಳಿಗೂ ಬಹಳವಾಗಿ ತಾಳೆಯಾಗುವುದಿಲ್ಲ. ಆದರೆ ಈ ಎರಡು ಮೂಲಗಳಿಂದ ಬಂದ ವರದಿಗಳಲ್ಲಿ ಸೂಚಿತವಾಗಿರುವ ಸಾಮಾನ್ಯ ಸಂಗತಿಯೆಂದರೆ ಶಾಲಾ ನೊಂದಾವಣೆಯಲ್ಲಿ 70ರ ದಶಕದಲ್ಲಿ ಕರ್ನಾಟಕವು ಹಿಂದೆ ಸರಿಯಿತೆಂಬ ವಿಷಯ. ರಾಜ್ಯ ಸರ್ಕಾರದ ಪ್ರಕಾರ ಈ ಹಿನ್ನಡೆ ಶೇ 2ರಷ್ಟಾಗಿದ್ದರೆ ಕೇಂದ್ರ ಸರ್ಕಾರದ ಪ್ರಕಾರ ಕರ್ನಾಟಕದಲ್ಲಿ ಈ ಹಿನ್ನಡೆ ಶೇ. 6 ರಷ್ಟಾಗಿತ್ತು. ಆದರೆ ನಿಜವಾಗಿ ಹಿನ್ನಡೆಯ ಪ್ರಮಾಣ ಇನ್ನೂ ಹೆಚ್ಚಿರುವ ಸಂಭವವನ್ನು ಕುರಿತು ಸಂಶಯ ಪಡಬಹುದು. 1978–79ರ ಇತ್ತೀಚಿನ ವರದಿಗಳಲ್ಲಿ ಕಂಡುಬರುವ ಬಾಲಕರ 1ರಿಂದ 5ನೆ ದರ್ಜೆಗಳಲ್ಲಿರುವ ನೊಂದಾವಣೆಯು 6 ರಿಂದ 11 ವರ್ಷ ಬಾಲಕರ ಜನಸಂಖ್ಯೆಗಿಂತಲೂ ಹೆಚ್ಚಾಗಿದೆ ಎಂಬ ಸಂಗತಿಯನ್ನು ಗಮನಿಸಿದಾಗ ಕಡ್ಡಾಯ ಶಿಕ್ಷಣವನ್ನು ಕುರಿತ ಅಂಕಿ ಅಂಶಗಳ ಮುಖಬೆಲೆಯು ಸಂದೇಹಾಸ್ಪದವಾಗುವ ಸಂಗತಿಯು ಬೆಳಕಿಗೆ ಬರುತ್ತದೆ. ಸರ್ಕಾರದ ಮೂಲಗಳ ಪ್ರಕಾರ ಶೇಕಡಾವಾರು ನೊಂದಾವಣೆಯನ್ನು ಕಂಡುಹಿಡಿಯುವಾಗ ಶಾಲೆಗಳಲ್ಲಿ 1ರಿಂದ 5ನೇ ದರ್ಜೆಗಳಲ್ಲಿರುವ ಎಲ್ಲ ಮಕ್ಕಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಆದರೆ ಈ ಎಲ್ಲ ಮಕ್ಕಳೂ 6ರಿಂದ 11ವರ್ಷ ವಯಸ್ಸಿಗೆ ಸೇರಿರುವುದಿಲ್ಲ. ಇವರಲ್ಲಿ 6ಕ್ಕಿಂತಲೂ ಕಡಿಮೆ ವಯಸ್ಸಿನ ಹಾಗೂ 11ಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳು ಕಂಡುಬರುತ್ತಾರೆ. ಹೀಗಾಗಿ ವರದಿ

ಮಾಡಿರುವ ನೋಂದಾವಣಿಯ ಶೇಕಡಾವಾರು ಪ್ರಮಾಣಗಳು 6 ರಿಂದ 11 ವರ್ಷ ವಯಸ್ಸಿನ ಮಕ್ಕಳ ಕಡ್ಡಾಯ ಶಿಕ್ಷಣವನ್ನು ಸೂಚಿಸುವುದಿಲ್ಲ. ಶಾಲೆಗಳಲ್ಲಿ ಸೇರಿರುವ ಮಕ್ಕಳ ವಯಸ್ಸಿನ ವರ್ಗಗಳನ್ನು ಪರೀಕ್ಷಿಸಿದ ಹೊರತು ಕಡ್ಡಾಯ ಶಿಕ್ಷಣದ ಪರಿಶೀಲನೆ ಪೂರ್ಣವಾಗುವುದಿಲ್ಲ. ಆದರೆ ಈ ಸಂಗತಿಯು ಶಾಲಾ ಪ್ರಗತಿಯ ಅಂಕಿ ಅಂಶಗಳ ವರದಿಗಳಲ್ಲಿ ಕಂಡುಬರುವುದಿಲ್ಲ.

6 ರಿಂದ 11 ವರ್ಷ ವಯಸ್ಸಿನ ಮಕ್ಕಳ ನೊಂದಾವಣಿ

ನಿಜವಾಗಿ ಕಡ್ಡಾಯ ಶಿಕ್ಷಣವನ್ನು ನೀಡಬೇಕಾಗಿರುವ 6 ರಿಂದ 11 ವರ್ಷ ಮಕ್ಕಳ ಶಾಲಾ ನೊಂದಾವಣಿಯನ್ನು ಮಾತ್ರ ಪರಿಶೀಲಿಸೋಣ. ಮೊದಲೇ ತಿಳಿಸಿದಂತೆ ವಾರ್ಷಿಕ ಪ್ರಗತಿಯ ವರದಿಗಳಲ್ಲಿ ಇದನ್ನು ಕುರಿತ ಅಂಕಿ ಅಂಶಗಳಿರುವುದಿಲ್ಲ. ಆದರೆ ರಾಷ್ಟ್ರಮಟ್ಟದಲ್ಲಿ ನಡೆಯುವ ಶೈಕ್ಷಣಿಕ ಪರಿವೀಕ್ಷಣೆಯನ್ನು ಗಮನಿಸಿದಾಗ ಮೂರನೇ ಪರಿವೀಕ್ಷಣೆಯಲ್ಲಿ (1973) ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಹಂತದ 1ರಿಂದ 5ನೇ ದರ್ಜೆಗಳಲ್ಲಿ ಸೇರಿರುವ ಮಕ್ಕಳಲ್ಲಿ ಶೇ. 82 ಭಾಗ ಮಾತ್ರ 6ರಿಂದ 11ನೇ ವರ್ಷ ವಯಸ್ಸಿನ ಗುಂಪಿಗೆ ಸೇರಿದ್ದರು. ಅಂದರೆ ಆ ವರ್ಷ 6ರಿಂದ 11ವರ್ಷ ವಯಸ್ಸಿನ ಒಟ್ಟು ಜನಸಂಖ್ಯೆಯಲ್ಲಿ ಕೇವಲ ಶೇ 75ರಷ್ಟು ಮಾತ್ರ ಶಾಲೆಗಳಿಗೆ ಸೇರಿದ್ದರು. ನಾಲ್ಕನೇ ಪರಿವೀಕ್ಷಣೆಯಲ್ಲಿ (1978) 6ರಿಂದ 11ವರ್ಷ ವಯಸ್ಸಿನ ಒಟ್ಟು ಜನಸಂಖ್ಯೆಯ ಶೇ 62ರಷ್ಟು ಮಾತ್ರ ಶಾಲೆಗೆ ಸೇರಿದ್ದರು. ಅಂದರೆ ಕಡ್ಡಾಯ ಶಿಕ್ಷಣದಲ್ಲಿ ಪ್ರಗತಿಗೆ ಬದಲಾಗಿ ಪ್ರತಿ ವರ್ಷ ಶೇ. 1 ಭಾಗಕ್ಕಿಂತಲೂ ಹೆಚ್ಚು ಅವನತಿಯುಂಟಾಯಿತು. ಇದೇ ಮಟ್ಟದಲ್ಲಿ ಹಿನ್ನಡೆಯಾಗುತ್ತಾ ಹೋಗಿದ್ದಲ್ಲಿ 1982-83ರಲ್ಲಿ 6ರಿಂದ 11ವರ್ಷ ವಯಸ್ಸಿನ ಮಕ್ಕಳ ಸಂಖ್ಯೆಯಲ್ಲಿ ಶೇ 56ಕ್ಕಿಂತಲೂ ಕಡಿಮೆ ಶಾಲೆಗಳಲ್ಲಿ ಸೇರಿರುತ್ತಾರೆ.

ಶಾಲೆಯಿಂದ ಹೊರಬರುವಿಕೆ

ಇದುವರೆಗೆ ಕೇವಲ ಶಾಲೆಗಳಲ್ಲಿ ಹೆಸರನ್ನು ಬರೆಸುವ ಮಕ್ಕಳನ್ನು ಕುರಿತು ಚರ್ಚಿಸಲಾಯಿತು. ಆದರೆ ಕಿರಿಯ ಪ್ರಾಥಮಿಕ ಶಾಲಾ ಮಟ್ಟದಲ್ಲಿಯೇ ಶಾಲೆಗಳಿಂದ ಹೊರಬರುವ ಮಕ್ಕಳು ಶಾಲೆಗೆ ಸೇರದಿರುವ ಮಕ್ಕಳ ಗುಂಪಿಗೆ ಸೇರಿಸಬಹುದು? ಏಕೆಂದರೆ ಶಾಲೆಗೆ ಸೇರಿದವರೂ ಹಾಗೂ ಪ್ರಾಥಮಿಕ ಶಾಲೆಯಲ್ಲಿ ಮೊದಲ ನಾಲ್ಕು ವರ್ಗಗಳನ್ನು ಮುಗಿಸದೇ ಶಾಲೆಯನ್ನು ಬಿಡುವವರು ಅನಕ್ಷರಸ್ಥರಾಗಿ ಬೆಳೆದು ದೊಡ್ಡವರಾಗುತ್ತಾರೆ. ಸರ್ಕಾರಿ ಅಂಕಿ ಅಂಶಗಳ ವರದಿಗಳಲ್ಲಿ ಪ್ರತಿವರ್ಷ ಶಾಲೆಯನ್ನು ಬಿಡುವವರ ಸಂಖ್ಯೆಯನ್ನು ಪ್ರತ್ಯೇಕವಾಗಿ ನೀಡಲಾಗುವುದಿಲ್ಲ. ಆದರೆ ಇದುವರೆಗೆ ಶಾಲೆಗಳಿಂದ ಹೊರಬೀಳುವವರನ್ನು ಕುರಿತು ಅನೇಕ ಸಂಶೋಧನೆಗಳು ತೋರಿಸುವಂತೆ ವಯಸ್ಸಿನ ಶಾಲೆಗೆ ಸೇರುವ ಒಂದು ಸಮವಯಸ್ಸಿನ ಮಕ್ಕಳ ಸಮುದಾಯದಿಂದ

ಸುಮಾರು ಶೇ 40 ರಿಂದ 60 ಮಂದಿ ಮಕ್ಕಳು ಮೊದಲ ನಾಲ್ಕು ತರಗತಿಗಳಿಂದ ಹೊರಬರುತ್ತಾರೆ. ಅಂದರೆ ಪ್ರತಿವರ್ಷ ಒಂದು ತರಗತಿಯು ಶೇ 10 ರಿಂದ 15ರಷ್ಟು ಮಕ್ಕಳ ಶಾಲೆಗಳಿಂದ ಹೊರಗುಳಿಯುತ್ತಾರೆ. ಈಗಾಗಲೇ ತೋರಿಸಿದಂತೆ ಶಾಲೆಗೆ ಸೇರಿದ 6 ರಿಂದ 11 ವರ್ಷವಯಸ್ಸಿನ ಮಕ್ಕಳಲ್ಲಿ ಅರ್ಧಭಾಗ ಮಾತ್ರ ಕಡ್ಡಾಯ ಶಿಕ್ಷಣದ ವ್ಯಾಪ್ತಿಗೆ ಒಳಪಟ್ಟಿದ್ದಾರೆ. ಸದ್ಯದ ಶಾಲಾ ವ್ಯವಸ್ಥೆಯಲ್ಲಿ ಇದಕ್ಕಿಂತಲೂ ಹೆಚ್ಚು ಪ್ರಮಾಣಕ್ಕೆ ಶಿಕ್ಷಣವನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಈ ನಿರ್ಣಯವನ್ನು ಸಮರ್ಥಿಸಲು ನಾವು ಪ್ರಾಥಮಿಕ ಶಿಕ್ಷಣದ ಮೇಲಿನ ಸರ್ಕಾರೀ ವೆಚ್ಚವನ್ನು ಪರಿಶೀಲಿಸೋಣ.

ಪ್ರಾಥಮಿಕ ಶಿಕ್ಷಣದ ಮೇಲಿನ ಖರ್ಚು

ಸಾವಿರದ ಒಂಬೈನೂರ ಎಪ್ಪತ್ತರ ದಶಕದ ಪ್ರಾರಂಭದ ವರ್ಷಗಳಲ್ಲಿ ಕಡ್ಡಾಯ ಶಿಕ್ಷಣದ ವೆಚ್ಚ ಸುಮಾರು ಮೂವತ್ತೊಂದು ಕೋಟಿ ರೂಪಾಯಿಗಳಾಗಿದ್ದವು. (1972-73ರಲ್ಲಿ ಪ್ರಾಥಮಿಕ ಮಟ್ಟದಲ್ಲಿ ಪ್ರತಿ ವಿದ್ಯಾರ್ಥಿಯ ಮೇಲೆ ರೂ. 87 ವ್ಯಯವಾಗುತ್ತಿತ್ತು). 1978-79 ರಲ್ಲಿ ಪ್ರತಿ ವಿದ್ಯಾರ್ಥಿಗೆ ರೂ. 144.00 ವ್ಯಯವಾಗುತ್ತಿತ್ತು. ಅಂದರೆ ವರ್ಷಕ್ಕೆ ಸುಮಾರು 59 ಕೋಟಿ ರೂಪಾಯಿಗಳಿಗೆ ಏರಿತು. 1979-80 ರಲ್ಲಿ ಪ್ರಾಥಮಿಕ ಶಿಕ್ಷಣದ ಮೇಲೆ (ಕೇವಲ 1 ರಿಂದ 5ನೇ ತರಗತಿಗಳಿಗೆ ಮಾತ್ರ ಸೀಮಿತವಾದಂತೆ) 71 ಕೋಟಿ ರೂಪಾಯಿಗಳು ಖರ್ಚಾದವು. ಎಪ್ಪತ್ತರ ದಶಕದಲ್ಲಿ ಪ್ರತಿ ವರ್ಷ ಶೇ 11.3 ರ ಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣದ ಖರ್ಚು ಹೆಚ್ಚುತ್ತಾ ಹೋಯಿತು. ಆದರೆ ಈ ಹೆಚ್ಚಳದಿಂದ ಯಾವ ಪ್ರಯೋಜನವೂ ಆದಂತಿಲ್ಲ. ಮೊದಲೇ ತೋರಿಸಿದಂತೆ 70 ರ ದಶಕದಲ್ಲಿ 6 ರಿಂದ 11 ವರ್ಷ ವಯಸ್ಸಿನ ಮಕ್ಕಳ ನೊಂದಾವಣೆಯಲ್ಲಿ ಪ್ರತಿ ವರ್ಷ ಶೇ 1.5 ರಷ್ಟು ಇಳಿಮುಖವಾಯಿತು. ಅಲ್ಲದೆ ಶಾಲೆಯಿಂದ ಹೊರಬರುವ ಹಾಗೂ ಅನುತ್ತೀರ್ಣವಾಗುವ ವಿದ್ಯಾರ್ಥಿಗಳಿಂದ (1 ರಿಂದ 5ನೇ ವರ್ಗಗಳಲ್ಲಿ) ಉಂಟಾಗುತ್ತಿರುವ ವ್ಯರ್ಥ ವ್ಯಯ 1972–73 ರಲ್ಲಿ ಸುಮಾರು 7 ಕೋಟಿಗಳಷ್ಟಿದ್ದರೆ 1978–79ರಲ್ಲಿ ಅದು ಸುಮಾರು 11 ಕೋಟಿಗಳಿಗೆ ಏರಿತು. ಒಂದು ಕಡೆ ಶಾಲೆಯ ನೊಂದಾವಣೆಯ ಇಳಿಮುಖ, ಇನ್ನೊಂದು ಕಡೆ ಪ್ರತಿ ವರ್ಷ 11.3ರಷ್ಟು ಹೆಚ್ಚುತ್ತಿರುವ ಖರ್ಚು ಮತ್ತು ಖರ್ಚಿನಲ್ಲಿ ಶೇ 15 ರಿಂದ 20ರಷ್ಟು ಅಪವ್ಯಯವಾಗುತ್ತಿರುವುದನ್ನು ಗಮನಿಸಿದಾಗ ಸದ್ಯದ ಶಾಲಾ ವ್ಯವಸ್ಥೆಯು ಎಲ್ಲ ಮಕ್ಕಳ ಕಡ್ಡಾಯ ಶಿಕ್ಷಣ ಸಾಧಿಸಲು ಅಸಮರ್ಥ ಎಂಬ ನಿರ್ಣಯವನ್ನು ಮಾಡಬಹುದು. ಈಗಿರುವ ಅವನತಿಯನ್ನೇ ಮುಂದುವರೆಸಿಕೊಂಡು ಹೋಗಲೂ ಸಹ 1989-90 ರ ವೇಳೆಗೆ 200 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇನ್ನು ನಿಜವಾದ ಪ್ರಗತಿಗೆ ಇದರ ಎರಡರಷ್ಟಾದರೂ ಖರ್ಚನ್ನು ಒದಗಿಸಬೇಕಾಗುತ್ತದೆ.

ಈ ಎಲ್ಲ ಸಂಗತಿಗಳನ್ನೂ ಗಮನಿಸಿದಾಗ ಕಡ್ಡಾಯ ಶಿಕ್ಷಣವನ್ನು ಒದಗಿಸುವ

ಏಕಸ್ವಾಮ್ಯ ಶಾಲಾವ್ಯವಸ್ಥೆ ಉಚಿತವೇ ಅಥವಾ ಸಮಾನಾಂತರವಾದ ಹಲವಾರು ಶಾಲಾವ್ಯವಸ್ಥೆಗಳನ್ನು ಬೆಳೆಸಬೇಕೆ ಎಂಬ ಪ್ರಶ್ನೆಗೆ ಉತ್ತರ ನೀಡಬೇಕಾಗುತ್ತದೆ. ಇದಕ್ಕೆ ಸಮಂಜಸವಾದ ಉತ್ತರವನ್ನು ಹುಡುಕೋಣ.

ಪರ್ಯಾಯ ಶಿಕ್ಷಣ ವ್ಯವಸ್ಥೆಯ ಯೋಜನೆ

ಇದುವರೆಗೆ ಶಿಕ್ಷಣ ವ್ಯವಸ್ಥೆಯನ್ನು ಕುರಿತು ನೀಡಿರುವ ಮಾರ್ಪಾಟುಗಳಲ್ಲಿ ಎರಡು ವಿಧ. ಮೊದಲನೆಯದು ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲು ಮಾಡದೆ ಅದರ ಸಾಮರ್ಥ್ಯವನ್ನು ಹೆಚ್ಚಿಸುವ ಸಲಹೆಗಳು. ಎರಡನೆಯದು ಸದ್ಯದ ವ್ಯವಸ್ಥೆಯನ್ನು ಸಂಪೂರ್ಣವಾಗಿ ತೆಗೆದು ಹೊಸವ್ಯವಸ್ಥೆಯನ್ನು ನಿರ್ಮಿಸುವುದು. ಮೊದಲನೆಯ ಸಲಹೆಗಳನ್ನು ಕಾರ್ಯರೂಪಕ್ಕೆ ತಂದಿದ್ದರೂ ಪರಿಸ್ಥಿತಿಯಲ್ಲಿ ಯಾವುದೇ ರೀತಿಯ ಅನುಕೂಲಕರ ಬದಲಾವಣೆ ಕಂಡುಬಂದಿಲ್ಲವೆಂದು ಈಗಾಗಲೇ ಕಂಡುಕೊಂಡಿದ್ದೇವೆ. ಶಾಲಾವ್ಯವಸ್ಥೆಯ ಸಾಮರ್ಥ್ಯ ಹೆಚ್ಚುವುದರ ಬದಲಾಗಿ ಅವನತಿಯುಂಟಾಗುತ್ತಿದೆ. ಎರಡನೆಯ ಸಲಹೆಯು ಮೂಲ ಶಿಕ್ಷಣ ಪದ್ಧತಿಯಲ್ಲಿ ರೂಪುಗೊಂಡಿದ್ದು ನಿಷ್ಫಲವಾದದ್ದು ಎಲ್ಲರಿಗೂ ತಿಳಿದ ಸಂಗತಿ. ಆದುದರಿಂದ ಇವೆರಡಕ್ಕೂ ನಡುವಣ ನಿಲವನ್ನು ರೂಪಿಸುವ ಪ್ರಯತ್ನ ಮಾಡೋಣ. ಈಗಿರುವ ವ್ಯವಸ್ಥೆಯು ಪಟ್ಟಣದ ವೇತನ ಪಡೆಯುವ ವರ್ಗಗಳಿಗೆ ಹಾಗೂ ಎಲ್ಲ ಪ್ರದೇಶಗಳ ಶ್ರೀಮಂತ ಹಾಗೂ ಮಧ್ಯಮ ವರ್ಗಗಳ ಜನರಿಗಾಗಿ ನಿರ್ಮಿತವಾಗಿದ್ದು, ಈ ಜನರು ಸದ್ಯದ ವ್ಯವಸ್ಥೆಯನ್ನು ಬಿಡಲು ಇಚ್ಛಿಸುವುದಿಲ್ಲ. ಆ ಕಾರಣ ಸದ್ಯದ ಅವಸ್ಥೆಯನ್ನು ಕದಲಿಸಲು ಪ್ರಯತ್ನಿಸದೇ ಬಡಜನರಿಗಾಗಿ ಒಂದು ಪರ್ಯಾಯ ವ್ಯವಸ್ಥೆಯನ್ನು ಕುರಿತು ಯೋಚಿಸಬೇಕು. ಜನಸಂಖ್ಯೆಯ ಶೇ. 40ಕ್ಕಿಂತಲೂ ಹೆಚ್ಚಿರುವ ಬಡಜನರ ಶಿಕ್ಷಣಾವಶ್ಯಕತೆಗಳನ್ನು ಪೂರೈಸುವ ವ್ಯವಸ್ಥೆಯ ಕಾರ್ಯವಿಧಾನಗಳು ಶ್ರೀಮಂತ ಹಾಗೂ ಮಧ್ಯಮ ವರ್ಗಗಳಿಗಾಗಿ ನಿರ್ಮಿತವಾಗುವ ವ್ಯವಸ್ಥೆಯ ಕಾರ್ಯವಿಧಾನಗಳಿಗಿಂತ ಭಿನ್ನವಾಗಿರಲೇಬೇಕು. ಆದರೆ ಎರಡೂ ವ್ಯವಸ್ಥೆಯ ಗುರಿಯು ಒಂದೇ ಆಗಿರಬೇಕು. ಹೀಗೆ ಒಂದೇ ಗುರಿಯನ್ನು ಹೊಂದಿರುವ ಹಾಗೂ ಬೇರೆ ಬೇರೆ ಕಾರ್ಯವಿಧಾನ ಹಾಗೂ ರಚನೆಯನ್ನು ಹೊಂದಿರುವ ಎರಡು ಪರ್ಯಾಯ ವ್ಯವಸ್ಥೆಗಳು ನಿರ್ಮಾಣಗೊಂಡಾಗ ಆರೋಗ್ಯಕರವಾದ ಸ್ಪರ್ಧಾತ್ಮಕ ಪರಿಸ್ಥಿತಿಯು ಉಂಟಾಗಿ ಶಿಕ್ಷಣದ ಮಟ್ಟವೂ ಸಹ ಉತ್ತಮಗೊಳ್ಳಲು ಸಹಾಯಕವಾಗುತ್ತದೆ.

ಪರ್ಯಾಯ ಶಿಕ್ಷಣ ವ್ಯವಸ್ಥೆ

ಪರ್ಯಾಯ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವ ಪ್ರಯತ್ನದಲ್ಲಿ ಎರಡು ಪ್ರಮುಖ ಸಮಸ್ಯೆಗಳನ್ನು ಪರಿಹರಿಸಬೇಕಾಗುತ್ತದೆ. ಮೊದಲನೆಯದಾಗಿ ಪರ್ಯಾಯ ವ್ಯವಸ್ಥೆಗೆ ಬೇಕಾಗುವ ಹಣದ ಸಮಸ್ಯೆ. ಈಗಾಗಲೇ ತಿಳಿಸಿದಂತೆ ಶಿಕ್ಷಣಕ್ಕಾಗಿ

ವ್ಯಯವಾಗುತ್ತಿರುವ ಒತ್ತಡವನ್ನುಂಟುಮಾಡುತ್ತಿವೆ. ಇನ್ನು ಇದರೊಂದಿಗೆ ಮತ್ತೊಂದು ಶಿಕ್ಷಣ ವ್ಯವಸ್ಥೆಗೆ ಹಣ ಒದಗಿಸಲು ಸರ್ಕಾರವು ಹಿಂಜರಿಯಬಹುದು. ಅದರಿಂದ ಹೊಸ ವ್ಯವಸ್ಥೆಯು ಹೆಚ್ಚು ಹಣವನ್ನು ಬೇಡದೆ, ಸದ್ಯದ ವ್ಯವಸ್ಥೆಯಲ್ಲಾಗುತ್ತಿರುವ ಅಪವ್ಯಯದ ಹಣದಿಂದ ನಡೆಸಲು ಸಾಧ್ಯವಾಗುವ ವ್ಯವಸ್ಥೆಯನ್ನು ಹೊಂದಿರಬೇಕು. ಆಗ ಸರ್ಕಾರವು ಸದ್ಯದಲ್ಲಾಗುತ್ತಿರುವ ಅಪವ್ಯಯದ ಹಣವನ್ನು ಪರ್ಯಾಯ ವ್ಯವಸ್ಥೆಯತ್ತ ತಿರುಗಿಸಲು ಸಾಧ್ಯವಾಗುತ್ತದೆ?

ಎರಡನೆಯ ಸಮಸ್ಯೆ ಮೊದಲನೆಯ ಸಮಸ್ಯೆಗೇ ಹೊಂದಿಕೊಂಡಂತೆ ಪರಿಮಿತ ಆರ್ಥಿಕ ಚೌಕಟ್ಟಿನಲ್ಲಿ ಸಮರ್ಥವಾದ ಶಿಕ್ಷಣ ಕಾರ್ಯ ವಿಧಾನವನ್ನು ರೂಪಿಸುವುದಕ್ಕೆ ಸಂಬಂಧಿಸಿರುತ್ತದೆ. ಈ ದಿಶೆಯಲ್ಲಿ ಶೀಘ್ರವಾಗಿ ಸಂಶೋಧನೆ ಪ್ರಾರಂಭಿಸುವ ಅವಶ್ಯಕತೆಯಿದೆ. ಇಂತಹ ಸಂಶೋಧನೆಗೆ ತಳಹದಿಯು ಈಗಾಗಲೇ ಆಗಿದ್ದು ಅದರ ಆಧಾರದ ಮೇಲೆ ಸ್ಥಳೀಯ ಅನುಕೂಲಗಳನ್ನು ಗಮನದಲ್ಲಿಟ್ಟು ನಿಶ್ಚಿತವಾಗುವ ಕಾರ್ಯ ರೂಪದ ಯೋಜನಾ ಸಂಶೋಧನೆಗೆ ನಾವು ತೊಡಗಬೇಕಾಗುತ್ತದೆ. ಮೇಲೆ ತಿಳಿಸಿದ ಒಂದಕ್ಕೊಂದು ಸಂಬಂಧಿಸಿದ ಎರಡು ಸಮಸ್ಯೆಗಳ ಹಿನ್ನೆಲೆಯಲ್ಲಿ ಒಂದು ಪರ್ಯಾಯ ಶಿಕ್ಷಣವ್ಯವಸ್ಥೆಯನ್ನು ಸ್ಥೂಲವಾಗಿ ಈ ಮುಂದೆ ಪರಿಚಯಿಸಲಾಗಿದೆ.

ಪರ್ಯಾಯ ಶಿಕ್ಷಣ ವ್ಯವಸ್ಥೆಯ ಉದ್ದೇಶ

ಪರ್ಯಾಯ ಶಿಕ್ಷಣ ವ್ಯವಸ್ಥೆಯು ಪ್ರಾಥಮಿಕ ಶಿಕ್ಷಣವನ್ನು ಒಂದು ಮೂಲಾವಶ್ಯಕತೆಯ ರೂಪದಲ್ಲಿ ಪರಿಗಣಿಸುತ್ತದೆ. ಜನಸಂಖ್ಯೆಯ ಬಹಳ ದೊಡ್ಡ ಭಾಗವು ಬೇರೆ ಬೇರೆ ಕಾರಣಗಳಿಂದ ಸದ್ಯದ ಶಾಲಾ ವ್ಯವಸ್ಥೆಯ ಉಪಯೋಗವನ್ನು ಪಡೆದು ಶಿಕ್ಷಣ ರೂಪದ ಮೂಲಾವಶ್ಯಕತೆಯನ್ನು ಪೂರೈಸಿಕೊಳ್ಳಲು ಸಮರ್ಥವಾಗುವುದಿಲ್ಲ. ಈ ಜನರ ಮೂಲಾವಶ್ಯಕತೆಯನ್ನು ಪೂರೈಸುವುದೇ ಪರ್ಯಾಯ ಶಿಕ್ಷಣ ವ್ಯವಸ್ಥೆಯ ಉದ್ದೇಶವಾಗಿರುತ್ತದೆ.

ಪಠ್ಯಕ್ರಮ

ಪರ್ಯಾಯ ಶಿಕ್ಷಣ ವ್ಯವಸ್ಥೆಯ ಪಠ್ಯಕ್ರಮವು ಜನರ ಅವಶ್ಯಕತೆಗಳ ಆಧಾರದ ಮೇಲೆ ರಚಿತವಾಗಿ ವಿಕೇಂದ್ರೀಯ ಸ್ವರೂಪವನ್ನು ಹೊಂದಿರುತ್ತದೆ. ಸ್ಥಳೀಯ ಪರಿಸ್ಥಿತಿ ಹಾಗೂ ಸಂದರ್ಭಗಳನ್ನು ಆಧರಿಸಿ ಜನರ ಅವಶ್ಯಕತೆಗಳನ್ನು ಗುರುತಿಸಲಾಗುತ್ತದೆ. ಆದರ್ಶ ರೂಪದಲ್ಲಿ ಪ್ರತಿಯೊಂದು ವಿಶಿಷ್ಟ ಸಾಮಾಜಿಕ ಆರ್ಥಿಕ ಸಂದರ್ಭಕ್ಕೂ ಒಂದೂ ಪ್ರತ್ಯೇಕ ಪಠ್ಯಕ್ರಮವನ್ನು ಪರ್ಯಾಯ ಶಿಕ್ಷಣ ವ್ಯವಸ್ಥೆಯು ಅನುಮೋದಿಸುತ್ತದೆ. ಆದರೆ ಆರ್ಥಿಕ ಹಾಗೂ ಕಾರ್ಯಶೀಲತೆಯ ದೃಷ್ಟಿಯಿಂದ ಈ ರೀತಿಯ ವೈವಿಧ್ಯತೆಗೆ ಪರಿಮಿತಿಯನ್ನು ಹಾಕಬೇಕಾಗುತ್ತದೆ. ಈ ಪರಿಮಿತಿಯೊಳಗೆ ಕರ್ನಾಟಕದಂತಹ ರಾಜ್ಯದಲ್ಲಿ ಭೌಗೋಳಿಕ ಸಾಮಾಜಿಕ ಸಮಾನತೆಯುಳ್ಳ

ಪ್ರದೇಶಗಳನ್ನು ಗುರುತಿಸಿ, ಆ ಪ್ರದೇಶಕ್ಕೆ ಅನ್ವಯವಾಗುವ ಪಠ್ಯಕ್ರಮವನ್ನು ಪ್ರಯೋಗಿಸಬಹುದು. ರಚನಶೀಲ ಸಂಶೋಧನೆ ಹಾಗೂ ತುಲನೆಯನ್ನು ಕೇಂದ್ರವಾಗಿಟ್ಟುಕೊಂಡಿರುವ ಪಠ್ಯಕ್ರಮ ಅಭಿವೃದ್ಧಿ ವಿಧಾನವನ್ನು ಬಳಸಿ ಪಠ್ಯಕ್ರಮವನ್ನು ರಚಿಸುವುದು ಪರ್ಯಾಯ ಶಿಕ್ಷಣ ವ್ಯವಸ್ಥೆಯ ವೈಶಿಷ್ಟ್ಯವಾಗಿರುತ್ತದೆ. ಈ ವಿಧಾದವಲ್ಲಿ ರಚನಶೀಲ ಸಂಶೋಧಕರು, ಸಂಪರ್ಕ ಮಾಧ್ಯಮಗಳನ್ನು ರಚಿಸುವವರು ಹಾಗೂ ಬೇರೆ ಬೇರೆ ವಿಷಯಗಳಲ್ಲಿ ಪಾಂಡಿತ್ಯವುಳ್ಳವರು ಒಂದು ತಂಡದ ರೂಪದಲ್ಲಿ ಕಾರ್ಯನಿರತರಾಗಿರುತ್ತಾರೆ.

ಬೋಧನಾ ವ್ಯವಸ್ಥೆ

ಸ್ವಂತ ಕಲಿಕೆಯ ಸಲುವಾಗಿ ತಯಾರಿಸಿದ ಮುದ್ರಿತ ರೂಪದ ಪಠ್ಯವಸ್ತುಗಳಿಂದ ಆಧಾರ ಪಡೆದ ಒಂದು ಅಥವಾ ಎರಡು ಜನ ಸಂಪರ್ಕ ಮಾಧ್ಯಮಗಳನ್ನು (ರೇಡಿಯೋ–ಟೆಲಿವಿಷನ್) ಕೇಂದ್ರವಾಗಿಟ್ಟುಕೊಂಡು ಬೋಧನಾ ವ್ಯವಸ್ಥೆಯನ್ನು ಏರ್ಪಡಿಸಲಾಗಿರುತ್ತದೆ. ಈ ರೀತಿಯ ವ್ಯವಸ್ಥೆಯಿಂದ ಸಹಸ್ರಾರು ವಿದ್ಯಾರ್ಥಿಗಳು ಏಕಕಾಲದಲ್ಲಿ ಒಬ್ಬ ಕುಶಲ ಹಾಗೂ ನುರಿತ ಶಿಕ್ಷಕನ ಸೇವೆಯನ್ನು ಪಡೆಯಲು ಸಾಧ್ಯವಾಗುತ್ತದೆ. ಅಲ್ಲದೆ ಶಿಕ್ಷಣವನ್ನು ನೀಡಲು ಕೆಲಸದ ಅವಧಿಗಳನ್ನು ವಿದ್ಯಾರ್ಥಿಗಳ ಅನುಕೂಲಕ್ಕೆ ತಕ್ಕಂತೆ ಏರ್ಪಡಿಸಲು ಸಾಧ್ಯವಾಗುತ್ತದೆ. ಅಲ್ಲದೆ ಈ ಬೋಧನಾ ವ್ಯವಸ್ಥೆಯು ವಿದ್ಯಾರ್ಥಿಯ ಬೌದ್ಧಿಕ ಬೆಳವಣಿಗೆಯ ಸಂಪೂರ್ಣ ಭಾರ ಹೊರವುದರಿಂದ ಸ್ಥಳೀಯವಾಗಿ ಕಾರ್ಯ ಮಾಡುವ ಶೈಕ್ಷಣಿಕ ಮೇಲ್ವಿಚಾರಕನು. ತನ್ನ ಸಮಯವನ್ನು ವಿದ್ಯಾರ್ಥಿಯ ಮಾನಸಿಕ ಹಾಗೂ ವ್ಯಕ್ತಿತ್ವದ ಬೆಳವಣಿಗೆಗೆ ವಿನಿಯೋಗಮಾಡಲು ಅನುವಾಗುತ್ತದೆ.

ಕಲಿವಿನ ಕೇಂದ್ರಗಳು

ಪರ್ಯಾಯ ಶಿಕ್ಷಣ ವ್ಯವಸ್ಥೆಯು ಕಲಿವಿನ ಕೇಂದ್ರಗಳ ಜಾಲವನ್ನು ಹೊಂದಿರುತ್ತದೆ. ಪ್ರತಿಯೊಂದು ಕೆಂದ್ರಗಳಲ್ಲಿಯೂ ಸ್ಥಳೀಕ ಶೈಕ್ಷಣಿಕ ಮೇಲ್ವಿಚಾರಕನು ಕಾರ್ಯಮಾಡುತ್ತಿರುತ್ತಾನೆ. ಕಲಿವಿನ ಕೇಂದ್ರಗಳ ವ್ಯವಸ್ಥೆ, ಕಲಿವಿನ ವಿಧಾನದಲ್ಲಿ ನೆರವಾಗುವುದು, ಕಲಿವಿನ ಪ್ರಗತಿಯ ಹಾಗೂ ಸಮಸ್ಯೆಗಳ ಬಗ್ಗೆ ಪಠ್ಯಕ್ರಮ ಅಭಿವೃದ್ಧಿಯ ಕೇಂದ್ರಕ್ಕೆ ವರದಿ ಒಪ್ಪಿಸುವುದು, ಮಕ್ಕಳ ಮಾನಸಿಕ ಹಾಗೂ ವ್ಯಕ್ತಿತ್ವ ಬೆಳವಣಿಗೆಯಲ್ಲಿ ನೆರವಾಗುವುದು, ಮುಂತಾದವು ಸ್ಥಳೀಯ ಶೈಕ್ಷಣಿಕ ಮೇಲ್ವಿಚಾರಕನ ಕರ್ತವ್ಯಗಳು. ಈತ ಸ್ವತಃ ಮಕ್ಕಳಿಗೆ ಪಠ್ಯವಸ್ತುವನ್ನು ಬೋಧಿಸುವ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಮೇಲ್ವಿಚಾರಕನು 9 ಅಥವಾ 10 ವರ್ಷಗಳ ಸಾಮಾನ್ಯ ಶಿಕ್ಷಣ ಪಡೆದಿದ್ದರೆ ಸಾಕು. ಪರ್ಯಾಯ ಶಿಕ್ಷಣ ವ್ಯವಸ್ಥೆಯಲ್ಲಿ ಕೆಲಸ ಮಾಡುವ ಮುನ್ನ ಮೇಲ್ವಿಚಾರಕನು ನೇಮಿಸಲ್ಪಟ್ಟವರಿಗೆ ವಿಶೇಷ ರೀತಿಯ ಅಲ್ಪಾವಧಿ

ತರಬೇತಿ ನೀಡಿ, ಪರ್ಯಾಯ ಸಂಪರ್ಕ ಸಾಧನಗಳನ್ನು ಉಪಯೋಗಿಸಿ ಆಗಿಂದಾಗ್ಗೆ ಅವರ ಕೆಲಸಮಾಡುವ ಸ್ಥಳದಲ್ಲಿಯೇ ತರಬೇತಿ ನೀಡಲು ಸಾಧ್ಯ.

ಪರ್ಯಾಯ ಶಿಕ್ಷಣ ವ್ಯವಸ್ಥೆಯ ಆರ್ಥಿಕ ಸಂಗತಿಗಳು

ಇಲ್ಲಿ ಮೇಲೆ ನೀಡಿರುವ ಪರ್ಯಾಯ ಶಿಕ್ಷಣ ವ್ಯವಸ್ಥೆಯು ಹಾಲಿ ಇರುವ ಶಿಕ್ಷಣ ವ್ಯವಸ್ಥೆಗಿಂತಲೂ ಬಹಳ ಕಡಿಮೆ ಖರ್ಚಿನದು. ಸ್ಥಳೀಯವಾಗಿ ದೊರೆಯುವ ಉಪಾಧ್ಯಾಯರುಗಳ ಖರ್ಚಿನಲ್ಲಿ ಉಂಟಾದ ಉಳಿತಾಯವು ಪರ್ಯಾಯ ಶಿಕ್ಷಣ ವ್ಯವಸ್ಥೆಯ ಖರ್ಚನ್ನು ಬಹಳ ಮಟ್ಟಿಗೆ ಕಡಿಮೆ ಮಾಡುತ್ತದೆ. ಪರ್ಯಾಯ ಶಿಕ್ಷಣ ವ್ಯವಸ್ಥೆಯ ಕಲಿವಿನ ಕೇಂದ್ರಗಳು ದಿನದಲ್ಲಿ ಸದ್ಯದ ಶಾಲೆಯ ½ ಭಾಗ ಕಾಲಮಾತ್ರ ಕೆಲಸಮಾಡುತ್ತವೆ. ಇಲ್ಲಿ ಮೇಲ್ವಿಚಾರಕರಾಗಿ ಕೆಲಸಮಾಡುವವರು ಹೆಚ್ಚು ವಿದ್ಯಾವಂತರಾಗಿ ವಿಶೇಷ ತರಬೇತಿಯನ್ನು ಪಡೆಯಬೇಕಾಗಿಲ್ಲ. ಹೀಗಾಗಿ ಇಂತಹ ಒಬ್ಬ ಮೇಲ್ವಿಚಾರಕರ ಸಂಬಳವು ಹಾಲಿ ಇರುವ ವ್ಯವಸ್ಥೆಯ ಶಿಕ್ಷಕನ ಸಂಬಳದಲ್ಲಿ ⅓ ಭಾಗ ಇರಬಹುದು. ಅಲ್ಲದೆ ಹಾಲಿ ಇರುವ ವ್ಯವಸ್ಥೆಯಲ್ಲಿ ಶಿಕ್ಷಣದ ಗುಣಮಟ್ಟವು ಶಿಕ್ಷಕರನ್ನು ಅವಲಂಬಿಸಿರುತ್ತದೆ. ಹೀಗಾಗಿ ಬೇರೆ ಬೇರೆ ಶಾಲೆಗಳಲ್ಲಿ ಕೆಲಸಮಾಡು ತ್ತಿರುವ ಶಿಕ್ಷಕರ ನೈಪುಣ್ಯತೆಯಲ್ಲಿ ವ್ಯತ್ಯಾಸಗಳಿದ್ದರೂ ಶಿಕ್ಷಕರ ಸಂಬಳವು ಒಂದೇ ಆಗಿರುತ್ತದೆ. ಅಂದರೆ ಶಿಕ್ಷಣದ ಮೇಲೆ ಮಾಡುವ ಖರ್ಚಿಗೂ ಶಿಕ್ಷಣದ ಗುಣ ಮಟ್ಟಕ್ಕೂ ಸಂಬಂಧವಿಲ್ಲದೇ ಹೋಗುತ್ತದೆ. ಆದರೆ ಪರ್ಯಾಯ ಶಿಕ್ಷಣ ವ್ಯವಸ್ಥೆ ಯಲ್ಲಿ ಶಿಕ್ಷಣಮಟ್ಟದ ಹತೋಟಿ ವ್ಯವಸ್ಥೆಯ ಕೈಯಲ್ಲಿರುತ್ತದೆ. ಈಗಾಗಲೇ ಜನ ಸಂಪರ್ಕ ಮಾಧ್ಯಮಗಳಾದ ರೇಡಿಯೋ, ಟಿ. ವಿ. ಮುಂತಾದ ಮಾಧ್ಯಮಗಳ ಅಭಿವೃದ್ಧಿ ಯಲ್ಲಿ ಸಾಕಷ್ಟು ಬಂಡವಾಳ ಹೂಡಲಾಗಿದೆ. ಇವೆಲ್ಲವನ್ನೂ ಗಣನೆಗೆ ತೆಗೆದು ಕೊಂಡಾಗ ಪರ್ಯಾಯ ಶಿಕ್ಷಣ ವ್ಯವಸ್ಥೆಯ ಖರ್ಚು ಬಹಳಷ್ಟು ಕಡಿಮೆಯಾಗುತ್ತದೆ. ಈ ಲೇಖನದ ಕಡೆಯಲ್ಲಿ ನೀಡಿರುವ ಪಟ್ಟಿಯಲ್ಲಿ ಈ ಎಲ್ಲ ಅಂಶಗಳನ್ನೂ ಒಂದುಗೂಡಿ ಪರ್ಯಾಯ ಶಿಕ್ಷಣ ವ್ಯವಸ್ಥೆಗೆ ತಗಲುವ ವೆಚ್ಚವನ್ನು ನೀಡಲಾಗಿದೆ. ಇದರ ಪ್ರಕಾ ಪರ್ಯಾಯ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರತಿ ವಿದ್ಯಾರ್ಥಿಯ ಮೇಲೆ ನೇರವಾಗಿ ವರ್ಷ ಒಂದಕ್ಕೆ ಬೇಕಾಗುವ ಸರ್ಕಾರಿ ವೆಚ್ಚವು ಹಾಲಿ ಇರುವ ವ್ಯವಸ್ಥೆಯಲ್ಲಿ ಬೇಕಾಗು ಇದೇ ಪೊಬಲಗಿನಲ್ಲಿ ಕೇವಲ ಅರ್ಧದಷ್ಟಿರುತ್ತದೆ. ಅಲ್ಲದೆ ಪರ್ಯಾಯ ಶಿಕ್ಷ ವ್ಯವಸ್ಥೆಯಲ್ಲಿ ಮಕ್ಕಳ ಶಿಕ್ಷಣದ ಖಾಸಗೀ ವೆಚ್ಚವು ಹೆಚ್ಚು ಕಡಿಮೆ ಇಲ್ಲದೇ ಹೋಗು ದರಿಂದ ಈ ರೀತಿಯ ಶಿಕ್ಷಣವು ಸಮಾಜಕ್ಕೆ ಬಹಳ ಅಗ್ಗವಾಗುತ್ತದೆ. ಕಾ ಹೋದಂತೆಲ್ಲ, ಶೈಕ್ಷಣಿಕ ತಂತ್ರಶಾಸ್ತ್ರದಲ್ಲಾಗುವ ಪ್ರಗತಿಯಿಂದ ಮತ್ತು ಒಮ್ಮೆ ತಯಾರಿಸಿದ ಕಲಿವಿನ ಸಾಮಾಗ್ರಿಗಳನ್ನು ಕಾಪಾಡಿಕೊಂಡು ಬರುವ ಸಾಧ್ಯತೆಯಿಂ ಪರ್ಯಾಯ ಶಿಕ್ಷಣ ವ್ಯವಸ್ಥೆಯ ವೆಚ್ಚದಲ್ಲಿ ಇಳುವರಿಯಾಗುತ್ತಾ ಹೋಗುವ ಅ ಕಾಶವೂ ಉಂಟು.

ಪರ್ಯಾಯ ಶಿಕ್ಷಣ ವ್ಯವಸ್ಥೆಯ ಯಶಸ್ಸಿಗೆ ಬೇಕಾಗುವ ಅತ್ಯಾವಶ್ಯಕ ಪರಿಸ್ಥಿತಿಗಳು

ಪರ್ಯಾಯ ಶಿಕ್ಷಣ ವ್ಯವಸ್ಥೆಯ ಯಶಸ್ಸು ಹಲವು ಅತ್ಯಾವಶ್ಯಕ ಪರಿಸ್ಥಿತಿಗಳನ್ನು **ಅವಲಂಬಿ**ಸಿರುತ್ತದೆ. ಮೊದಲನೆಯದಾಗಿ ಕಡ್ಡಾಯ ಶಿಕ್ಷಣ ಕಾಯಿದೆಯು ಪರ್ಯಾಯ **ಶಿಕ್ಷಣ** ವ್ಯವಸ್ಥೆಯನ್ನು ರಾಜ್ಯ ಸರ್ಕಾರದಿಂದ ಮಾನ್ಯವಾದ ಶಿಕ್ಷಣ ವ್ಯವಸ್ಥೆಯಾಗಿ **ಪರಿಗಣಿ**ಸಬೇಕು. ಸಂಶೋಧನೆ ಮತ್ತು ಅಭಿವೃದ್ಧಿಕಾರ್ಯಗಳನ್ನು ಪ್ರಾರಂಭಿಸಿ **ಪರ್ಯಾಯ** ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲು ಎರಡು ಮೂರು ವರ್ಷಗಳನ್ನು **ನೀಡಬೇಕು.** ಸ್ಥಳೀಯ ಜನಸಂಪರ್ಕ ಮಾಧ್ಯಮಗಳನ್ನು ಬೆಳೆಸಬೇಕು. ಅನೇಕ **ಅಂತರರಾಷ್ಟ್ರೀಯ** ಸಂಸ್ಥೆಗಳು ಇಂತಹ ಶಿಕ್ಷಣ ವ್ಯವಸ್ಥೆಯನ್ನ ಅಭಿವೃದ್ಧಿಪಡಿಸಲು ಹಣಸಹಾಯ **ಮಾ**ಡುವ ಕಾತುರವನ್ನು ಹೊಂದಿವೆ. ಇಂತಹ ಮೂಲಗಳನ್ನ ಹುಡುಕಿ ಅವುಗಳ **ನೆರವಿನೊಂ**ದಿಗೆ ಸರ್ಕಾರವೂ ಸಹ ಹಣಕಾಸಿನ ನೆರವನ್ನು ನೀಡಿ, ಈ ದಿಶೆಯಲ್ಲಿ **ಸಂಶೋಧನೆ** ಮತ್ತು ಅಭಿವೃದ್ಧಿ ಕಾರ್ಯಗಳನ್ನು ಉತ್ತೇಜಿಸಬೇಕು. ಈ ಕಾರ್ಯಭಾರವನ್ನು ಹಾಲಿ ಇರುವ ಶಿಕ್ಷಣ ವ್ಯವಸ್ಥೆಯ ಅಧಿಕಾರಿಗಳ ವಶಕ್ಕೆ ನೀಡುವುದು ಸರಕಾರದ ಸಹಜ ಒಲವಾಗಿರುತ್ತದೆ. ಆದರೆ ಇಂಥಹ ಹೊಸ ವ್ಯವಸ್ಥೆಯನ್ನು ಕುರಿತು ಯಾವ ರೀತಿಯ ಸಂಗತಿಗಳೂ ಹಾಲಿ ಇರುವ ಶಿಕ್ಷಣ ಅಧಿಕಾಗಳಲ್ಲಿ ಬಹಳ ಜನರಿಗೆ ತಿಳಿದಿಲ್ಲ. ಆದುದರಿಂದ ಪ್ರಾರಂಭದಲ್ಲಿ ಯೋಜನೆಯ ಪ್ರಯೋಗದ ರೂಪದಲ್ಲಿ ಪರ್ಯಾಯ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತಂದು ಒಟ್ಟಾರೆ ಆಡಳಿತ ಅಧಿಕಾರವನ್ನು ಶೈಕ್ಷಣಿಕ ಕಮಿಷನವರಿಗೆ ವಹಿಸಿ, ಪ್ರಾಯೋಗಿಕ ಮಟ್ಟದಲ್ಲಿ ಹಾಲಿ ಶಿಕ್ಷಣ ವ್ಯವಸ್ಥೆಯಿಂದ ಸ್ವತಂತ್ರವಾಗಿ ಕಾರ್ಯತತ್ಪರವಾಗುವಂತೆ ಈ ಪ್ರಯೋಗವನ್ನು ಯೋಚಿಸಬೇಕಾಗುತ್ತದೆ. ಶಿಕ್ಷಣಕ್ಷೇತ್ರದಲ್ಲಿ ಹೊಸದಾಗಿ ಪ್ರವೇಶಿಸುವ ಪದಾಧಿಕಾರಿಗಳನ್ನು ಈ ಯೋಜನೆಯ ಅಡಿಯಲ್ಲಿ ತರಬೇತಿ ನೀಡಿ ಅವರನ್ನು ಕಾರ್ಯತತ್ಪರರನ್ನಾಗಿ ಮಾಡಬೇಕು. ಈ ದಿಶೆಯಲ್ಲಿ ಇನ್ನೂ ಅನೇಕ ಸೂಕ್ಷ್ಮ ಸಂಗತಿಗಳನ್ನು ಗುರುತಿಸುವ ಕಾರ್ಯವಿನ್ನೂ ಉಳಿದಿದೆ. ಆದರೆ ಈ ಲೇಖನದಲ್ಲಿ ಅವೆಲ್ಲವನ್ನೂ ಗುರುತಿಸಲು ಸಾಧ್ಯವಿಲ್ಲ. ಮುಗಿಸುವ ಮೊದಲು ಎಲ್ಲಕ್ಕಿಂತಲೂ ಮುಖ್ಯವಾದ ಸಂಗತಿಯನ್ನು ಎತ್ತಿ ಹಿಡಿಯಲು ಆಶಿಸುತ್ತೇನೆ. ಅದೇನೆಂದರೆ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುವ ರಾಜನೈತಿಕ ಒಲವು ಹಾಗೂ ಕಡ್ಡಾಯ ಶಿಕ್ಷಣ ಮೇಲಿನ ಭರವಸೆ ಸಮಾಜದಲ್ಲುಂಟಾಗಬೇಕು. ಇಂತಹ ಭರವಸೆಯು ಕೇವಲ ಹಾಲಿ ಇರುವ ಶಿಕ್ಷಣ ವ್ಯವಸ್ಥೆಗೆ ಮಾತ್ರ ಸೀಮಿತವಾಗಿರಬಾರದು.

ಪಟ್ಟಿ

ರೇಡಿಯೋ ಹಾಗೂ ಮುದ್ರಣ ಮಾಧ್ಯಮಗಳನ್ನವಲಂಬಿಸಿದ ಪರ್ಯಾಯ ಶಿಕ್ಷಣ ವ್ಯವಸ್ಥೆಯ ವಾರ್ಷಿಕ ಖರ್ಚಿನ ಪಟ್ಟಿ. (ವಿದ್ಯಾರ್ಥಿಗಳ ಸಂಖ್ಯೆ–30000(ರೇಡಿಯೋ ಕಾರ್ಯಕ್ರಮ–200 ಘಂಟೆಗಳು)

ರೂ. ಸಾವಿರಗಳ

1.	**ಪ್ರಸಾರ** ಪ್ರಸಾರ ಸಾಮಗ್ರಿಗಳ ಆಯುಸ್ಸನ್ನು ಹತ್ತು ವರ್ಷಗಳಂತೆ ತೆಗೆದು ಕೊಂಡು ಶೇ. 7.5 ವಾರ್ಷಿಕ ದರದಲ್ಲಿ ಅನ್ವಯ ಮಾಡಿದಂತೆ ಬೇಕಾಗುವ ಬಂಡವಾಳ (ಹೂಡಬೇಕಾಗಿರುವ ಬಂಡವಾಳ 20ಲಕ್ಷ	29.2
2.	**ರೇಡಿಯೋ ಗ್ರಾಹಿಕೆ** 3000 ಕೇಂದ್ರಗಳಲ್ಲಿ ಇರುವ ರೇಡಿಯೋ ಆಯುಸ್ಸನ್ನು ಹತ್ತು ವರ್ಷದಂತೆ ತೆಗೆದುಕೊಂಡಾಗ ಶೇ. 7.5 ದರದಲ್ಲಿ ಬೇಕಾಗುವ ಬಂಡವಾಳ (ಹೂಡಬೇಕಾಗಿರುವ ಬಂಡವಾಳ 9 ಲಕ್ಷ)	13.4
3.	ರೇಡಿಯೋ ಹಾಗೂ ಮುದ್ರಣ ಮಾಧ್ಯಮಗಳ ತಯಾರಿಕೆಗೆ ತಗಲುವ ಖರ್ಚು (ಗಂಟೆ ಒಂದಕ್ಕೆ ರೂ. 5000 ದಂತೆ ವರ್ಷಕ್ಕೆ 200 ಗಂಟೆಗಳಿಗೆ)	1000.
4.	ಸ್ಥಳೀಯ ಶಿಕ್ಷಕರ ಮೇಲ್ವಿಚಾರಕರ ಸಂಬಳ 3000 2 200 12	14400.
5.	ಶಿಕ್ಷಣ ಮೇಲ್ವಿಚಾರಕ ಸಂಬಳದಲ್ಲಿ ಶೇ. 3 ರಷ್ಟು ಶೈಕ್ಷಣಿಕ ಸಾಮಗ್ರಿ ದುರಸ್ತು ಮುಂತಾದ ಖರ್ಚು	432.
	ಒಟ್ಟು ವಾರ್ಷಿಕ ಖರ್ಚು	15874

ಒಂದು ವರ್ಷಕ್ಕೆ ಒಬ್ಬ ವಿದ್ಯಾರ್ಥಿಗೆ ತಗಲುವ ಸರಾಸರಿ ಖರ್ಚು (ರೂಪಾಯಿಗಳಲ್ಲಿ) ರೂ. 53.0

ಸೂಚನೆ : 1. ಹಾಲಿ ಇರುವ ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ವರ್ಷಕ್ಕೆ ವಿದ್ಯಾರ್ಥಿಗೆ ತಗಲುವ ಸರಾಸರಿ ವೆಚ್ಚವು 1972–73 ರೂ. 87 ಇದ್ದು 1979–80 ರೂ. 144ಕ್ಕೆ ಏರಿತು. ವರ್ಷದಲ್ಲಿ ವ್ಯರ್ಥ ಖರ್ಚು ವರ್ಷಕ್ಕೆ ರೂ. 6.6 ಕೋಟಿಂ ರೂ. 10.6 ಕೋಟಿಗಳಿಗೆ ಏರಿತು.

2. ಪ.ಶಿ. ವ್ಯಯ ಖರ್ಚನ್ನು 70ರ ದಶಕದಲ್ಲಿದ್ದ ದರಗಳನ್ನು ಆ ಲೆಕ್ಕ ಮಾಡಲಾಗಿದೆ.

ನಾನು ಪ್ರಸಿದ್ಧ ಪಂಜಾಬೀ ಕವಯಿತ್ರಿ ಮತ್ತು ಕಾದಂಬರಿಕಾರ್ತಿಯಾದ ಅಮೃತಾ ಪ್ರೀತಮ್ ಅವರನ್ನು ಅವರಿಗೆ 1981 ಜ್ಞಾನಪೀಠ ಪ್ರಶಸ್ತಿಯು ದೊರೆತ ಹೊಸದರಲ್ಲಿಯೇ ಸಂದರ್ಶಿಸಿದೆ. ಭಾರತದಲ್ಲಿ ಜೀವನ ಮತ್ತು ಕಲೆಗಳಿಗೆ ಸಂಬಂಧಪಟ್ಟ ಹಾಗೆ ಮತ್ತು ಸ್ವಂತ ಕೃತಿಗಳನ್ನು ಕುರಿತ ಅವರ ಧೋರಣೆಯ ಬಗ್ಗೆ ಅವರೊಂದಿಗೆ ವಿವರವಾಗಿ ಮಾತನಾಡಿದೆ. ಪ್ರಾದೇಶಿಕ ಸಾಹಿತಿಗಳ ಪೈಕಿ ಇಂಗ್ಲಿಷ ಮತ್ತು ಹಿಂದಿಗೆ ಅತ್ತಿ ಹೆಚ್ಚಿನ ಪ್ರಮಾಣದಲ್ಲಿ ಅನುವಾದಿತವಾಗಿರುವ ಕವಿ, ಕಾದಂಬರಿಗಾರ್ತಿ ಅವರು. ಅವರಿಗೆ ಪ್ರಶಸ್ತಿ ಬಂದಿರುವುದು, ಅವರು 1973ರಲ್ಲಿ ಪ್ರಕಟಿಸಿದ 'ಕಾಗದ ಮತ್ತು ಕ್ಯಾನವಾಸ್' ಎಂಬ ಪಂಜಾಬಿ ಕವನ ಸಂಕಲನಕ್ಕಾದರೂ, ಅವರು ಕಳೆದ ಅನೇಕ ವರ್ಷಗಳಿಂದ ಕಾವ್ಯಕ್ಕಿಂತ ಹೆಚ್ಚಾಗಿ ಕಥಾಸಾಹಿತ್ಯವನ್ನೇ ಬರೆಯುತ್ತಾ ಬಂದಿದ್ದಾರೆ. ಅವರ ಅತಿ ಚರ್ಚಿತವಾದ ಮತ್ತು ಸಾರ್ವತ್ರಿಕ ಮನ್ನಣೆ ಪಡೆದ 'ನಲವತ್ತೊಂಬತ್ತು ದಿನಗಳು' ಎಂಬ ಕಾದಂಬರಿಯ ಇಂಗ್ಲಿಷ ಭಾಷಾಂತರವು 1981ರಲ್ಲಷ್ಟೇ ಪ್ರಕಟವಾಯಿತು. ಈ ಸಂದರ್ಶನವು ಅವರ ವ್ಯಕ್ತಿತ್ವದ ಬೌದ್ಧಿಕ ಮತ್ತು ಕಲಾತ್ಮಕ ಮುಖಗಳನ್ನು ಬೆಳಕಿಗೆ ತರುತ್ತದೆ – ಸಂದರ್ಶಕಿ).

ಅಮೃತಾ ಪ್ರೀತಮ್ ಅವರೊಂದಿಗೆ ಒಂದು ಸಂದರ್ಶನ

ರಮಾ ಝಾ

ರಮಾ ಝಾ : ಅಮೃತಾ ಅವರೇ, ನೀವು ಬರೆಯಲು ಪ್ರಾರಂಭಿಸಿದ್ದು ಹೇಗೆ ? ಇದು ಮತ್ತೆ ಮತ್ತೆ ಕೇಳಲಾಗುವ ಪ್ರಶ್ನೆಯೆಂದು ನನಗೆ ಗೊತ್ತು. ಆದರೆ ಒಬ್ಬ ಕಲಾವಿದನನ್ನು ತಿಳಿಯಲು ಇದು ಅತ್ಯುತ್ತಮವಾದ ಮಾರ್ಗ. ನಾನು, ವಿಭಜನ ಪೂರ್ವ ಪಂಜಾಬ್‌ನಲ್ಲಿ ನೀವು ಕವಿತೆ ಬರೆಯತೊಡಗಿದ ದಿನಗಳನ್ನು ಕುರಿತು ಮಾತನಾಡುತ್ತಿದ್ದೇನೆ. ಸಂಪ್ರದಾಯನಿಷ್ಠವಾದ ಅಂದಿನ ಪಂಜಾಬೀ ಸಾಂಸ್ಕೃತಿಕ ಸಂದರ್ಭದಲ್ಲಿ ನೀವು ಏಕೈಕ ಕವಯಿತ್ರಿಯಾಗಿರಬೇಕು. ನಿಮಗೆ ಕಾವ್ಯ ರಚನೆಗೆ ಪ್ರೇರಣೆ ಲಭಿಸಿದ್ದು ಎಲ್ಲಿಂದ ?

ಅ.ಪ್ರೀ : ಬಾಲ್ಯದಲ್ಲಿಯೂ ಕೂಡ ಬರವಣಿಗೆ ನನಗೆ ಅಷ್ಟೇನೂ ಅಪರಿಚಿತವಾಗಿರಲಿಲ್ಲ. ವಾಸ್ತವವಾಗಿ ನಾನು ಬೆಳೆದಿದ್ದು ಲೇಖಕರಿಂದ ತುಂಬಿದ ವಾತಾವರಣದಲ್ಲಿ. ಸ್ವತಃ ನನ್ನ ತಂದೆಯವರೇ ಒಬ್ಬ ಕವಿಯಾಗಿದ್ದರು. ಅವರು ರಾತ್ರಿಯೆಲ್ಲಾ ಬರೆದು ಬೆಳಗಿನ ಹೊತ್ತು ನಿದ್ರಿಸುತ್ತಿದ್ದರು. ಇದು ಅವರ ಬರವಣಿಗೆಯ ದಿನಚರಿಯಾಗಿತ್ತು. ನನ್ನ ತಾಯಿ,

ಬಹಳ ಮುಂಚೆಯೇ ಎಂದರೆ ನಾನು ಹನ್ನೊಂದನೆ ವರ್ಷದ ಹುಡುಗಿಯಾಗಿದ್ದಾಗ ಸತ್ತುಹೋದರು. ಹೀಗಾಗಿ ಒಬ್ಬಳೇ ಮಗಳಾದ ನಾನು, ತಂದೆ ಹಗಲೆಲ್ಲ ಮಲಗಿರುತ್ತಿದ್ದುದರಿಂದ ಒಂಟಿಯಾಗಿಯೇ ಬೆಳೆದೆ. ಹೀಗಾಗಿ ಯಾವುದಕ್ಕೂ ಬಲವಂತವಿಲ್ಲದ ನಾನು ಪುಸ್ತಕಗಳ ಲೋಕದಲ್ಲಿ ಮುಳುಗಿ ಹೋದೆ. ನನಗಿನ್ನೂ ನೆನಪಿದೆ ನಮ್ಮದು ಪುಸ್ತಕಗಳಿಂದ ತುಂಬಿದ ದೊಡ್ಡ ಮನೆ.

ರ.ಝಾ : ಯಾವರೀತಿಯ ಪುಸ್ತಕಗಳು ?

ಅ.ಪ್ರೀ : ಧರ್ಮ ಅಥವಾ ಭಾರತೀಯ ಪುರಾಣಗಳಿಗೆ ಸಂಬಂಧಿಸಿದವು.

ರ.ಝಾ : ನೀವು ಈ ಪುಸ್ತಕಗಳನ್ನು ಮೊದಲು ಓದಿದ್ದು, ಪಂಜಾಬೀ ಎಂದರೆ ಗುರು ಮುಖಿ ಭಾಷೆಯಲ್ಲೇನು ?

ಅ.ಪ್ರೀ : ಹೌದು. ಬೇರೇನು ತಾನೇ ಸಾಧ್ಯ ?

ರ.ಝಾ : ನೀವು ಇಂಗ್ಲಿಷ ಪುಸ್ತಕಗಳನ್ನು ಓದತೊಡಗಿದ್ದು ಯಾವಾಗ ?

ಅ.ಪ್ರೀ : ಅದೆಲ್ಲಾ, ಆಮೇಲೆ ತುಂಬಾ ತಡವಾಗಿ ಬಂತು.

ರ.ಝಾ : ನೀವು ನಿಮ್ಮ ಬದುಕಿನ ಮೊದಲ ದಿನಗಳಲ್ಲೇ ಓದಿದ ಕೆಲವು ಲೇಖಕರ ಹೆಸರು ಹೇಳುವಿರಾ ?

ಅ.ಪ್ರೀ : ನಾನು ಮೊದಲ ಪಂಜಾಬೀ ಮಾರ್ಗ ಕಾವ್ಯದ ಸಂಕಲನವೊಂದನ್ನು ಓದಿದೆ. ಅದರಲ್ಲಿ ಷೇಕ್ ಫರೀದ್, ಷಾ ಹುಸೇನ್, ವಾರಿಸ್‌ಷಾ, ಪೀಲೂ, ಹಷಮ್ ಮುಂತಾದವರ ಕವಿತೆಗಳಿದ್ದವು. ಪುರಾಣಗಳು ಸಂಸ್ಕೃತದಿಂದ ಪಂಜಾಬೀ ಭಾಷೆಗೆ ಅನುವಾದಿತವಾಗಿದ್ದವು. ಇವೆಲ್ಲ ಪುಸ್ತಕಗಳೂ ಕೈಬರೆಹದ ಪ್ರತಿಗಳು. ನಮ್ಮ ತಂದೆ ಇವನ್ನು ಎರವಲು ತೆಗೆದುಕೊಂಡು, ಹಣಕೊಟ್ಟು ನಕಲು ತೆಗೆಸುತ್ತಿದ್ದರು. ನನಗೆ ಅಲ್ಲಿ ಕಳೆದ ಅನೇಕ ಮಧ್ಯಾಹ್ನಗಳು ನೆನಪಾಗುತ್ತಿವೆ.... ಈ ಲಿಪಿಕಾರರು. ಕಪ್ಪು ಮತ್ತು ಕೆಂಪು ಮಸಿಯಲ್ಲಿ, ತುಂಬ ಸುಂದರ ವಾದ ಅಕ್ಷರಗಳಲ್ಲಿ, ಅನೇಕ ಪುಸ್ತಕಗಳ ಪ್ರತಿ ಮಾಡುತ್ತಿದ್ದರು.

ರ.ಝಾ : ಆಗ ನೀವು ಎಲ್ಲಿದ್ದಿರಿ ? ಹಳ್ಳಿಯಲ್ಲಾ ? ನಿಮ್ಮ ತಂದೆ ಶ್ರೀಮಂತ ಜಮೀನ್ದಾರರೇ ? ಅಥವಾ....

ಅ.ಪ್ರೀ : ಅಲ್ಲ. ಅದು ನಡೆದದ್ದು ಹಳ್ಳಿಯಲ್ಲಲ್ಲ. ಲಾಹೋರ್ ನಗರದ ಮಧ್ಯಭಾಗದಲ್ಲಿ. ನಮ್ಮ ತಂದೆ ನಿಸ್ಸಂದೇಹವಾಗಿ ಶ್ರೀಮಂತರು ಅವರು ಜಾಗೀರ್ದಾರರ ಕುಟುಂಬದಿಂದ ಬಂಡವರಾಗಿದ್ದು ಜಮೀನ್ದಾರಿ ಹಿನ್ನೆಲೆಯನ್ನು ಪಡೆದಿದ್ದರು. ಇನ್ನೊಂದು ಗುಟ್ಟಿನ ಮಾತು. ನಮ್ಮ ತಂದೆ ಹದಿನಾಲ್ಕನೇ ವಯಸ್ಸಿನಲ್ಲಿಯೆ ಮನೆ ಬಿಟ್ಟು ಓಡಿಹೋದರು ಸನ್ಯಾಸಿಯಾದರು, ಬಾಲಸನ್ಯಾಸಿ. ಅವರು ನಮ್ಮ ತಾಯಿಯನ್ನು

ಪ್ರೀತಿಸಿದ್ದು ಸನ್ಯಾಸಿಯಾಗಿದ್ದಾಗಲೇ. ಅವರು ಕವಿಯಾಗಿದ್ದು ಕೂಡ ಹಾಗೆಯೇ.

ರ.ಝಾ : ಇದೆಲ್ಲ ಬಹಳ ಕುತೂಹಲಕರವಾಗಿದೆ. ಆದರೆ ನೀವು ಹೇಳಿದಂತೆ, ನಿಮ್ಮ ಬರವಣಿಗೆಯ ಗೀಳಿನಿಂದ ನೀವು ಒಂಟಿಯಾದಿರಿ. ಹಾಗಾದರೆ ನೀವು ಬರೆಯತೊಡಗಿದ್ದು ನಿಮ್ಮ ಏಕಾಂಗಿತನವನ್ನು ತುಂಬಿ ಕೊಳ್ಳಲೇನು ?

ಅ.ಪ್ರೀ : ಹೌದು. ಖಂಡಿತವಾಗಿಯೂ ನಿಜ. ನಾನು ಬರೆಯತೊಡಗಿದ್ದು ನನ್ನ ಏಕಾಂತದ ಕ್ಷಣಗಳನ್ನು ತುಂಬಲೆಂದು. ಆದರೆ ನನ್ನ ತಂದೆ ಯವರ ಮಾರ್ಗದರ್ಶನವೂ ಇತ್ತು. ಅವರು ನನ್ನ ಮೊದಲ ಗುರು. ನನಗೆ ಮಾತ್ರೆಗಳ ಉಪಯೋಗದ ಮತ್ತು ಉಪವಿನ್ಯಾಸಗಳ ಪರಿಚಯ ಮಾಡಿಕೊಟ್ಟವರು ಅವರೇ.

ರ.ಝಾ : ಆದರೆ ನಿಮಗೆ ತುಂಬಾ ಚಿಕ್ಕ ವಯಸ್ಸಿನಲ್ಲೇ ಮದುವೆಯಾಯ್ತಿ ತಲ್ಲವೇ ?

ಅ.ಪ್ರೀ : ಹೌದು, ನನ್ನ ಮದುವೆಯ ನಿಶ್ಚಿತಾರ್ಥವಾದಾಗ ನನಗೆ ನಾಲ್ಕು ವರ್ಷ. ಮದುವೆಯಾದಾಗ ಹದಿನೈದು ವರ್ಷ.

ರ.ಝಾ : ನಿಮ್ಮ ವಿವಾಹ ಜೀವನ ನಿಮ್ಮ ಸಮಗ್ರಗಮನವನ್ನು ಸೆಳೆದುಕೊಳ್ಳ ಲಿಲ್ಲವೇ ? ನಿಮ್ಮ ಮೊದಲ ಕವನ ಸಂಕಲನ ಬಂದಿದ್ದು ನಿಮ್ಮ ಮದುವೆಯ ನಂತರ ನಿಮಗೆ ಹದಿನೇಳು ವರ್ಷಗಳಾದಾಗ.

ಅ.ಪ್ರೀ : ನನ್ನ ಕುಟುಂಬದ ಯೋಗಕ್ಷೇಮವನ್ನು ನೋಡಿಕೊಳ್ಳುವ ಕೆಲಸ ನನಗೆ ಸಾಕಷ್ಟಿತ್ತು. ಆದರೆ ಬರೆಯುವ ಚಪಲ ನನ್ನನ್ನು ಬಿಡಲೇ ಇಲ್ಲ. ವರ್ಷಗಳು ಕಳೆದಂತೆ ಅದು ಮತ್ತಷ್ಟು ತೀವ್ರವಾಯಿತು.

ರ.ಝಾ : ನಿಮ್ಮ ಮೊದಲ ಕವನ ಸಂಕಲನ ಯಾವುದು ?

ಅ.ಪ್ರೀ : 'ಅಮೃತ ಶಿಲೆಗಳು'–ಅದು ಪಂಜಾಬಿನ ವಿಭಜನೆಗಿಂತ ಮೊದಲೇ ಪ್ರಕಟವಾಯಿತು. 'ದೂರದ ದಾರಿಗಳು' ಎಂಬ ನನ್ನ ಎರಡನೆಯ ಸಂಕಲನದಲ್ಲಿ ವಿಭಜನೆಯನ್ನು ಕುರಿತ ಕವನಗಳಿವೆ.

ರ.ಝಾ : ನೀವು ಆ ಕಾಲದಲ್ಲಿ ಬರೆಯುತ್ತಿದ್ದ ಏಕೈಕ ಪಂಜಾಬಿ ಮಹಿಳೆಯಿರ ಬೇಕೆಂದು ನನ್ನ ಅನ್ನಿಸಿಕೆ. ನಿಮ್ಮ ಸಮಕಾಲೀನ ಕವಿಗಳು ಯಾರು ?

ಅ.ಪ್ರೀ : ಸಾದತ್ ಹಸನ್ ಮಿಂಟೋ, ರಾಜೇಂದರ್‌ಸಿಂಗ್ ಬೇಡಿ, ಕೃಷ್ಣ ಚಂದರ್ ಮುಂತಾದವರು. ಆದರೆ ಅವರೆಲ್ಲರೂ ಗದ್ಯದಲ್ಲಿ ಬರೆಯು ತ್ತಿದ್ದರು. ಅದರಲ್ಲೂ ಮಿಂಟೋ ಮತ್ತು ಕೃಷ್ಣ ಚಂದರ್ ಉರ್ದು ಭಾಷೆಯಲ್ಲಿ ಸಣ್ಣ ಕಥೆಗಳನ್ನು ರಚಿಸುತ್ತಿದ್ದರು.

ರ.ಝಾ : ನಿಮ್ಮ ಕವನಗಳ ಬಗ್ಗೆ ಇನ್ನಷ್ಟು ಮಾತನಾಡಿ.

ಆ.ಪ್ರೀ : ಒಳ್ಳೆಯದು, 'ನಾಗಮಣಿ' ನನ್ನ ಮತ್ತೊಂದು ಕವನ ಸಂಕಲನ.

ರ.ಝಾ : ನಾನು 'ನಾಗಮಣಿ'ಯೆಂದರೆ ಈಗ ನೀವು ಸಂಪಾದಕಿಯಾಗಿರುವ ಪತ್ರಿಕೆಯೆಂದು ತಿಳಿದಿದ್ದೆ.

ಆ.ಪ್ರೀ : ಹೌದು. ನಿಮ್ಮ ಮಾತು ನಿಜ. ಆದರೆ 'ನಾಗಮಣಿ' ನನ್ನ ಸಂಕಲನಗಳಲ್ಲಿ ಒಂದರ ಹೆಸರು ಕೂಡ.

ರ.ಝಾ : ನಾನು ನಿಮಗೆ ಪ್ರಶಸ್ತಿಯನ್ನು ದೊರಕಿಸಿ ಕೊಟ್ಟ 'ಕಾಗಜ್ ತೇ ಕ್ಯಾನ್‌ವಾಸ್' ಎಂಬ ಕೃತಿಯ ಬಗ್ಗೆ ಕೇಳಲು ಉತ್ಸುಕಳಾಗಿದ್ದೇನೆ. ಅದು ನಿಮ್ಮ ಇತ್ತೀಚಿನ ಕೃತಿಯೇನು ?

ಆ.ಪ್ರೀ : ಅಲ್ಲ. ವಾಸ್ತವವಾಗಿ ಆ ಸಂಕಲನ ಹತ್ತು ವರ್ಷಗಳ ಹಿಂದೆ ಹೊರ ಬಂತು. ಆದರೆ ನಾನು ಅದಾದ ಮೇಲೆ ಯಾವ ಸಂಕಲನವನ್ನೂ ಪ್ರಕಟಿಸಿಲ್ಲ. 'ಆಯ್ದ ಕವನಗಳು' ಪ್ರಕಟವಾಗಿವೆ ನಿಜ. ಹೊಸ ದೇನೂ ಇಲ್ಲ.

ರ.ಝಾ : ಈ ಪ್ರಶಸ್ತಿ ವಿಜೇತ ಸಂಕಲನದ ವಸ್ತುವೇನು ? 'ಸೃಜನಶೀಲ ಕ್ರಿಯೆ'ಯನ್ನು ಕುರಿತಾದ ಚಿಂತನೆಯೇ ನಿಮ್ಮ ಸಂಕಲನದ ಪ್ರಮುಖ ನೆಲೆಯೇನು ? ಬರವಣಿಗೆ ಮತ್ತು ಚಿತ್ರಕಲೆ ಎರಡಕ್ಕೂ ಅನ್ವಯಿಸುವ ಹಾಗೆ.

ಆ.ಪ್ರೀ : ಅದು ಜೀವನವನ್ನು ಕುರಿತ ನನ್ನ ದೃಷ್ಟಿಕೋನವನ್ನು ಹೇಳುತ್ತದೆ. ನನ್ನ ಜೀವನ ದರ್ಶನವನ್ನು ಹೇಳುತ್ತದೆ.

ರ.ಝಾ : ನೀವು ಕವಿಯಾಗಿ ಸಾಕಷ್ಟು ಯಶಸ್ವಿಯಾಗಿದ್ದಿರಿ. ನಿಮಗೆ ಸಾಹಿತ್ಯ ಅಕ್ಯಾಡೆಮಿಯ ಪ್ರಶಸ್ತಿ ಕೂಡಾ ಬಂದಿತ್ತು. ನೀವು ಅದನ್ನು ಬಿಟ್ಟು ಕತೆ–ಕಾದಂಬರಿಗಳನ್ನು ಬರೆಯತೊಡಗಲು ಕಾರಣವೇನು ?

ಅ.ಪ್ರೀ : ಹಾಗೇನೂ ಇಲ್ಲ. ನಾನು ಕವಿತಾ ರಚನೆಯನ್ನು ನಿಲ್ಲಿಸಿಲ್ಲ. ಎರಡು ಮಾರ್ಗಗಳಲ್ಲೂ ಬರೆಯುತ್ತಿದ್ದೇನೆ. ಆದರೆ ಕಥಾಸಾಹಿತ್ಯ ಹೋಲಿಸಿದರೆ ಕವಿತೆಗಳ ಪ್ರಮಾಣ ಕಡಿಮೆಯಾಗಿರುವುದೂ ನಿಜ.

ರ.ಝಾ : ನೀವು ನಿಮ್ಮ ಕಾವ್ಯ ಮತ್ತು ಕಾದಂಬರಿಗಳನ್ನು ಪ್ರತ್ಯೇಕ ಲೋಕಗಳಾಗಿ ವಿಂಗಡಿಸುವಿರೇನು ?

ಆ.ಪ್ರೀ : ಕೆಲವು ಬಾರಿ ನನ್ನ ಮಟ್ಟಿಗಂತೂ ಕೃತಿಯ ವಸ್ತುವೇ ಆದರ ಶಿಲ್ಪವನ್ನು ನಿರ್ಧರಿಸುತ್ತದೆ. ಉದಾಹರಣೆಗೆ ಈಚೆಗೆ ನಾನು ಏಳು ಭಾಗಗಳಿರುವ ಸುದೀರ್ಘ ಕಥನಕವನವೊಂದನ್ನು ರಚಿಸಿದೆ. ಅದರಲ್ಲಿ ಆದಿ ರಚನಾ, ಆದಿ ಪುಸ್ತಕ್, ಆದಿ ಚಿತ್ರ, ಆದಿ ಸಂಗೀತ್, ಆದಿ ಕಬಿಲ ಮತ್ತು ಆದಿ ಲಾ ಎಂದು ಆ ಭಾಗಗಳ ಹೆಸರುಗಳು.

ರ.ಝಾ : ಇಲ್ಲಿ 'ಆದಿ' ಎಂದರೆ ಪ್ರಾರಂಭವೆಂದು ಅರ್ಥವೇನು ?

ಅ.ಪ್ರೀ : ಹೌದು. ವೇದಗಳಿಗಿಂತ ಹಿಂದಿನ ಆದಿಕಾಲ.

ರ.ಝಾ : ನೀವು ಈ ಎಲ್ಲ ರೂಪಗಳು ಆಗ ಹೇಗಿದ್ದವೆಂದು ವರ್ಣಿಸಲು, ಮಾನಸಿಕವಾಗಿ ಆ ಕಾಲಕ್ಕೆ ಯಾತ್ರೆ ಹೋಗಿದ್ದಿರೇನು ? ಇತ್ತೀಚೆಗಂತೂ ನೀವು ಶುದ್ಧ ಫ್ಯಾಂಟಸಿಯ ವಲಯಗಳಿಂದಲೇ ಬರೆಯುತ್ತಿರುವಂತೆ ಭಾಸವಾಗುತ್ತದೆ.

ಅ.ಪ್ರೀ : ನಿಮ್ಮ ಊಹೆ ಸರಿಯಿದ್ದರೂ ಇರಬಹುದು. ಆದರೆ ನೋಡಿ, ಇವೆಲ್ಲಾ ....ವೇದಗಳು, ಮೊದಲ ರಾಗ, ಮೊದಲ ನ್ಯಾಯಶಾಸ್ತ್ರ....ಇವೆಲ್ಲಾ ಬಂದಿದ್ದು ಆಮೇಲೆ. ನಾನು ಇವೆಲ್ಲದಕ್ಕಿಂತ ಹಿಂದಿನ ಕಾಲಕ್ಕೆ ಮಾನಸಿಕವಾಗಿ ಚಲಿಸುತ್ತೇನೆ. ಮೊದಲ ಸೃಷ್ಟಿಯ ಕಾಲ. ಈ ಬ್ರಹ್ಮಾಂಡ ಸಮಗ್ರ ವಿಶ್ವ ರೂಪಿತವಾದ ಕಾಲ. ನಾನು ಇಡೀ ಕವನವನ್ನು ಯಾವುದೋ ಒಂದು ಲಹರಿಯಲ್ಲಿ ಬರೆದೆ.

ರ.ಝಾ : ನೀವು ಅಲ್ಲಿ ಭಾರತೀಯ ಸಾಂಸ್ಕೃತಿಕ ಪರಂಪರೆಯ 'ಆದಿ' ಮೌಲ್ಯಗಳಿಗಾಗಿ ಹುಡುಕುತ್ತಿರುವಿರೇನು ?

ಅ.ಪ್ರೀ : ಇಲ್ಲ. ನಾನು ಹೇಳುತ್ತಿರುವುದು ಭಾರತೀಯ ಸಂಸ್ಕೃತಿಯ ಉಗಮಕ್ಕಿಂತ ಹಿಂದಿನ ಕಾಲದ ಬಗ್ಗೆ. ಇತಿಹಾಸ ಪೂರ್ವ ಯುಗ ನನ್ನ ಕವನದ ವಸ್ತು.

ರ.ಝಾ : ನಿಮ್ಮ ಮೊದಲ ಕಾದಂಬರಿಯಾದ 'ಡಾಕ್ಟರ್‌ದೇವ್', 1949ರಲ್ಲಿ ಎಂದರೆ ವಿಭಜನೆಯಾದ ಎರಡು ವರ್ಷಗಳ ನಂತರ ಪ್ರಕಟವಾಯಿತು. ನಿಮ್ಮ ಕಾದಂಬರಿಗಳ ಮೇಲೆ ವಿಭಜನೆಯ ಪರಿಣಾಮವೇನು ?

ಅ.ಪ್ರೀ : ಹೌದು, ಪಂಜಾಬಿನ ವಿಭಜನೆಯ ಅನುಭವವು ನನ್ನ ಮೇಲೆ ತೀವ್ರ ಪರಿಣಾಮ ಬೀರಿತು- ನಾನು ಲಾಹೋರ್‌ನಗರ ಬೆಂಕಿ ಹತ್ತಿಕೊಂಡು ಉರಿಯುವುದನ್ನು ನೋಡಿದ್ದೇನೆ. ಮಹಿಳೆಯರ ಪಾಡು, ಅವರು ಪಡುತ್ತಿದ್ದ ನೋವು ಮತ್ತು ಅವರ ಅಪಹರಣದ ಸುದ್ಧಿಗಳು ದಿಗ್ಭ್ರಮೆ ಹುಟ್ಟಿಸುತ್ತಿದ್ದವು.

ರ.ಝಾ : ನೀವು ಈ ಹತ್ಯಾಕಾಂಡಗಳನ್ನು, ಆದರ ಪರಿಣಾಮವಾದ, ಮಹಿಳೆಯ ಸ್ಥಿತಿಯನ್ನು ಸ್ವತಃ ನೋಡಿದ್ದೀರಾ ?

ಅ.ಪ್ರೀ : ಹೌದು, ಆಗ ನಾನು ನನ್ನ ಮೊದಲ ಮಗುವನ್ನು ನಿರೀಕ್ಷಿಸುತ್ತಿದ್ದೆ. ನಾವು ವೈದ್ಯರ ಸಲಹೆಯ ಮೇರೆಗೆ ಡೆಹ್ರಾಡೂನ್‌ಗೆ ಬಂದಿದ್ದೆವು. ನಾನು ಮೃಣಾಳಿನಿ ಸಾರಾಭಾಯ್ ಮತ್ತು ಷಾ ನವಾಜ್ ಖಾನ್ ಅವರನ್ನು ಮೊದಲಬಾರಿಗೆ ಭೇಟಿಯಾಗಿದ್ದು ಸರಿ ಸುಮಾರು ಆ ಕಾಲದಲ್ಲೇ. ಮೃಣಾಳಿನಿಯವರು ನನಗೆ ಸ್ತ್ರೀಯರ ಪಾಡನ್ನು ಕುರಿತ ಅನೇಕ ಸತ್ಯಕಥೆಗಳನ್ನು ಹೇಳುತ್ತಿದ್ದರು. ಡಾಕ್ಟರ್ ದೇವ್

ಮತ್ತು ಪಿಂಜ್ಞಾರ್ ಎಂಬ ಎರಡೂ ಕಾದಂಬರಿಗಳಲ್ಲೂ ವಿಭಜನೆಯ ಪ್ರಸ್ತಾಪ ಬಂದಿದೆ. ವಿಭಜನೆಯನ್ನೇ ಆಧರಿಸಿದ ನನ್ನ 'ಅಜ್ ಅಖಾನ್ ವಾರಿಸ್ ಷಾನನ್' (Aj Akhan Waris Shah Nun) ಎಂಬ ಕವನವು ಪಾಕೀಸ್ಥಾನದಲ್ಲೂ ಬಹಳ ಜನಪ್ರಿಯವಾಗಿತ್ತು.

ರ.ಝಾ : ನಿಮ್ಮ ಕಾವ್ಯದಲ್ಲಿ ನಿಕ್ಷಿಪ್ತವಾಗಿದ್ದ ಎಲ್ಲ ಆದರ್ಶಗಳನ್ನು ಕುರಿತು ನಿಮಗೆ ಭ್ರಮನಿರಸನವಾದ ಮೇಲೆ ನೀವು ಆ ಕಾದಂಬರಿಗಳನ್ನು ಒಂದರ ನಂತರ ಬರೆದಿರೆಂದು ನನಗನ್ನಿಸುತ್ತೆ. ಈ ಮಾತು ನಿಜವೇ?

ಅ.ಪ್ರೀ : ಇಲ್ಲ. ಅದು ಹಾಗೇನೂ ಅಲ್ಲ. ಕಾದಂಬರಿಯು ನನಗೆ ಹೆಚ್ಚು ವಿಶಾಲವಾದ ಒದಗಿಸುತ್ತದೆ. ಡಾಕ್ಟರ್‌ದೇವ್, ನನ್ನ ಪ್ರಕಾರ ಒಬ್ಬ ಪ್ರೇಮಿಯು ಹೇಗಿರಬೇಕೆನ್ನುವುದನ್ನು ಚಿತ್ರಿಸುತ್ತದೆ ಅವನು ಒಬ್ಬ ಆದರ್ಶವಾದಿ ಅಂತರಂಗದ ಪರಿಶುದ್ಧತೆಯುಳ್ಳ ವ್ಯಕ್ತಿ.

ರ.ಝಾ : ನೀವು ಡಾಕ್ಟರ್ ದೇವ್‌ನ ಪಾತ್ರವನ್ನು ವರ್ಣಿಸಿರುವುದನ್ನು ನೋಡಿದರೆ ಆ ಪಾತ್ರವು ಗಾಂಧೀವಾದದ ಕೆಲವು ಅಂಶಗಳಿಂದ ಪ್ರಭಾವಿತವಾಗಿರುವಂತೆ ಕಾಣುತ್ತದೆ?

ಅ.ಪ್ರೀ : ಇಲ್ಲ. ಅದಕ್ಕೂ ಗಾಂಧಿಗೂ ಏನೂ ಸಂಬಂಧವಿಲ್ಲ.

ರ.ಝಾ : ಆದರೆ ನೀವೇ ಈಗ ತಾನೇ ಹೇಳಿದಂತೆ, ಆ ಪಾತ್ರದ ಗುಣಗಳೆಲ್ಲ ಗಾಂಧಿಯವರು ಮೆಚ್ಚಿದಂಥವೇ.

ಅ.ಪ್ರೀ : ಅವನು ಹೊಸ ಭಾರತದ ಹೊಸ ಮೌಲ್ಯಗಳ ಪ್ರತೀಕ.

ರ.ಝಾ : ಹಾಗಾದರೆ ನೀವು ನಿಮ್ಮ ಕವನಗಳಲ್ಲಿ ಮತ್ತು ಕಾದಂಬರಿಗಳಲ್ಲಿ ಹೊಸ ಮೌಲ್ಯಗಳನ್ನು ಸೃಷ್ಟಿಸುತ್ತಿದ್ದಿರೇನು ?

ಅ.ಪ್ರೀ : ಹೌದು. ಯಾಕೆಂದರೆ ಮೌಲ್ಯಗಳಿಲ್ಲದೆ ಯಾರೊಬ್ಬರೂ ಕಲಾವಿದರಾಗುವುದು ಸಾಧ್ಯವಿಲ್ಲ. ಕಲಾವಿದನು ಶೂನ್ಯದಲ್ಲಿ ಬದುಕುವುದಿಲ್ಲ. ಹಳೆಯ ಮೌಲ್ಯಗಳು ನಿರುಪಯುಕ್ತವಾಗಿ ಮೃತವಾದಾಗ ಕಲಾವಿದನು ಹೊಸ ಮೌಲ್ಯಗಳನ್ನು ರೂಪಿಸುತ್ತಾನೆ.

ರ.ಝಾ : ನೀವು ತುಂಬಾ ವ್ಯಾಪಕವಾಗಿ ವಿಶ್ವಸಂಚಾರ ಮಾಡಿದ್ದೀರಿ. ನೀವು ಮೊದಲ ಬಾರಿಗೆ ವಿದೇಶಯಾತ್ರೆ ಮಾಡಿದ್ದು ಯಾವಾಗ ಮತ್ತು ಯಾವ ಸಂದರ್ಭದಲ್ಲಿ?

ಅ.ಪ್ರೀ : ನಾನು ಮೊದಲಬಾರಿ ಭಾರತದಿಂದ ಹೊರಗೆ ಹೋಗಿದ್ದು 1961ರಲ್ಲಿ ಸೋವಿಯತ್ ರಷ್ಯಾದಲ್ಲಿ ಲೇಖಕರ ಸಮಾವೇಶವೊಂದರಲ್ಲಿ ಭಾಗವಹಿಸಲೆಂದು ಹೋಗಿದ್ದೆ.

ರ.ಝಾ : ಕಳೆದ ವರ್ಷ ನೀವು ಮತ್ತೊಂದು ಸಾಹಿತಿಗಳ ಸಮಾವೇಶದಲ್ಲಿ ಭಾಗವಹಿಸಲೆಂದು ಬಲ್ಗೇರಿಯಾಗೆ ಹೋಗಿದ್ದಿರಿ. ಆಗ ನಿಮಗೆ ನಿಕೊಲ

ವಾಪ್ತಸರೋವ್ ಸಾಹಿತ್ಯ ಪ್ರಶಸ್ತಿ ಬಂತು. ಆ ಸಂದರ್ಭದಲ್ಲಿ ನೀವು ಅನೇಕ ಮಹತ್ವದ ಲೇಖಕಿಯರನ್ನು ಭೇಟಿಯಾಗಿರಬೇಕು. ಯೂರೋಪಿನ ಲೇಖಕಿಯರ ಬರವಣಿಗೆಯ ಬಗ್ಗೆ ನಿಮ್ಮ ಅಭಿಪ್ರಾಯ ವೇನು ?

ಆ.ಪ್ರೀ : ನಿಜ, ನಾನು ಅನೇಕ ಲೇಖಕಿಯರನ್ನು ಭೇಟಿಯಾದೆ. ಅವರಲ್ಲಿ ಅನೇಕರ ನಿಕಟ ಸಹಯೋಗದೊಂದಿಗೆ ಅವರ ಕೃತಿಗಳನ್ನು ಅನುವಾದಿಸಿದೆ. ಅವರ ಬರೆಹಗಳು ನಮ್ಮದಕ್ಕಿಂತ ಅಷ್ಟೇನೂ ಭಿನ್ನವಾಗಿಲ್ಲ. ನಾನು ಮೊದಲಬಾರಿಗೆ ಅನುವಾದ ಮಾಡಿದ ಯೂರೋಪಿನ ಲೇಖಕಿಯೆಂದರೆ ಉಜ್‌ಬೆಕಿಸ್ಥಾನದ ಕವಯತ್ರಿ ಜುಲ್ಫಿಯಾ ಖಾನುಮ್.

ರ.ಝಾ : ನೀವು ಯಾರಾದರೂ ಪುರುಷರ ಕೃತಿಗಳನ್ನು ಅನುವಾದಿಸಿದ್ದೀರಾ ?

ಆ.ಪ್ರೀ : ಹೌದು ನಾನು ಇತ್ತೀಚೆಗೆ ಬಲ್ಗೇರಿಯನ್ ಭಾಷೆಯ ಹದಿನೈದು ಕತೆಗಳನ್ನು ಅನುವಾದಿಸಿದ್ದೇನೆ. ಆ ಸಂಕಲನದ ಹೆಸರು, 'ಮೆಟ್ಟಿಲುಗಳು' ಎಂದು. ಅಲ್ಲಿನ ಕತೆಗಾರರೆಲ್ಲರೂ ಪುರುಷರೇ.

ರ.ಝಾ : ಸ್ತ್ರೀಯರನ್ನು ಕುರಿತು ನಿಮ್ಮ ಅಭಿಪ್ರಾಯಗಳಾವುವು ? ಮಹಿಳಾ ವಿಮೋಚನೆ (Women's Lib) ಚಳುವಳಿಯ ಬಗ್ಗೆ ನೀವೇನು ಹೇಳುತ್ತೀರಿ.

ಆ.ಪ್ರೀ : ಸ್ತ್ರೀಯರ ಸ್ವಾತಂತ್ರ್ಯವು ಪುರುಷರ ಸ್ವಾತಂತ್ರ್ಯಕ್ಕಿಂತ ಭಿನ್ನವಲ್ಲ. ಹೆಣ್ಣಿನ ಹಾಗೆಯೇ ಗಂಡೂ ಕೂಡ ಮಾನಸಿಕವಾಗಿ ಗುಲಾಮನೇ. ಗಂಡು ಇದುವರೆಗೂ, ಸರಿ ಸಮಾನ ಸಂಗಾತಿಯಾಗಿ, ಸ್ವತಂತ್ರ ಮಹಿಳೆಯ ಸ್ನೇಹ ಮತ್ತು ಸಹವಾಸಗಳನ್ನು ಪಡೆದಿಲ್ಲ. ಸ್ವತಂತ್ರರಾದ ಮನುಷ್ಯ ಜೀವಿಗಳಾಗಿ ಸ್ತ್ರೀ ಪುರುಷರು ಒಬ್ಬರನ್ನೊಬ್ಬರು ಸಂಧಿಸಿಯೇ ಇಲ್ಲ. ಹೆಣ್ಣು ಗಂಡುಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗದೆ ಇದ್ದರೆ ಪರಸ್ಪರ ಪ್ರೀತಿಸುವುದಾದರೂ ಹೇಗೆ ? ಸಾಮಾನ್ಯವಾಗಿ ಹೆಣ್ಣು ಪ್ರೀತಿಸುವುದು ಅಭದ್ರತೆಯ ಭಾವನೆಯ ಪರಿಣಾಮವಾಗಿ, ಪ್ರೀತಿಯೆಂದರೆ ಮತ್ತೊಬ್ಬ ವ್ಯಕ್ತಿಯನ್ನು ಮೆಚ್ಚುವುದು ಮತ್ತು ಅವನ/ಳ ಸಹವಾಸವನ್ನು ಬಯಸುವುದು. ಆರ್ಥಿಕದಾಸ್ಯವು ಪ್ರೀತಿಯ ನಿಜವಾದ ಅನುಭವಕ್ಕೆ ಅಡ್ಡಿಯಾಗುತ್ತದೆ. ಸ್ತ್ರಿ ವಿಮೋಚನಾ ಚಳುವಳಿಯೆಂದರೆ, ಕೇವಲ ಹಕ್ಕುಗಳ ಸಂರಕ್ಷಣೆಗಾಗಿ ಘೋಷಣೆಗಳನ್ನು ಕೂಗುವುದಲ್ಲ. ನನಗಂತೂ ಆ ರೀತಿಯ ವಿಮೋಚನೆಯಲ್ಲಿ ನಂಬಿಕೆಯಿಲ್ಲ. ನನ್ನ ಮಟ್ಟಿಗೆ ಸ್ತ್ರಿ ವಿಮೋಚನೆಯೆಂದರೆ ಅವಳ ವ್ಯಕ್ತಿತ್ವದ ಹೆಚ್ಚು ಸಮಗ್ರವಾದ ಬೆಳವಣಿಗೆ. ಹಾಗಾದಾಗ

ಆವಳು ಸ್ವಾತಂತ್ರ್ಯಕ್ಕಾಗಿ ಬೇರೆಯವರನ್ನು ಕೇಳಬೇಕಾಪ್ಪದಿಲ್ಲ. ಅದನ್ನು ಸಾಧಿಸುವ ಸಾಮರ್ಥ್ಯವನ್ನು ಆವಳೇ ಬೆಳಸಿಕೊಳ್ಳುತ್ತಾಳೆ.

ರ.ಝಾ : ನಿಮ್ಮ 'ಕರೀ ಧೂಪ್ ಕಾ ಸಫರ್' ಎಂಬ ಗ್ರಂಥವು ಮಹಿಳೆಯರನ್ನು ಕುರಿತಿದೆಯೆಂದು ಕೇಳಿದ್ದೇನೆ. ದಯವಿಟ್ಟು ಆ ಕೃತಿಯನ್ನು ಕುರಿತು ಕೆಲವು ವಿವರಗಳನ್ನು ಕೊಡುವಿರಾ ?

ಅ.ಪ್ರೀ : ಅದೊಂದು ಬಗೆಯ ಗದ್ಯಕೃತಿ. ಅದು ವಿಶ್ವದ ಮಹಿಳಾ ಕವಿಗಳ ಅಧ್ಯಯನ.... ಋಗ್ವೇದದ ಕಾಲದಿಂದ ಇಂದಿನವರೆಗಿನ ಕವಯಿತ್ರಿಯರು.

ರ.ಝಾ : ಮಹಿಳೆಯರ ಜಗತ್ತು ನಿಮಗೆ ಹೊಸದೇನೂ ಅಲ್ಲ. ನೀವು ಹೇಳುತ್ತಿರುವ ಈ ಮಹಿಳೆಯರು ಯಾರು? ಅವರ ವ್ಯಕ್ತಿತ್ವದ ಯಾವ ಭಾಗವನ್ನು ಕುರಿತು ನಿಮ್ಮ ಕೃತಿ ಚರ್ಚಿಸುತ್ತದೆ.

ಅ.ಪ್ರೀ : ನಾನು ಈ ಕ್ಷೇತ್ರದಲ್ಲಿ ನಡೆಸಿರುವ ಸಂಶೋಧನೆಯು, ಕನಿಷ್ಟ ಪಕ್ಷ ಇಪ್ಪತ್ತೇಳು ಜನ ಮಹಿಳೆಯರು ವೇದಗಳ ರಚನೆಯಲ್ಲಿ ಭಾಗವಹಿಸಿದರೆಂಬ ಸಂಗತಿಯನ್ನು ಬೆಳಕಿಗೆ ತಂದಿದೆ.

ರ.ಝಾ : ಅವರ ಪೈಕಿ ಕೆಲವರ ಹೆಸರು ಹೇಳುವಿರಾ ?

ಅ.ಪ್ರೀ : ಉದಾಹರಣೆಗೆ ಲೋಪಾಮುದ್ರಾ, ರಾತ್ರಿಸೂರ್ಯ ಇತ್ಯಾದಿ.

ರ.ಝಾ : ಸರಿ, ಹಾಗಾದರೆ ಇದೊಂದು ಸಂಶೋಧನಾ ಕೃತಿ. ಆದರೆ ನೀವು ಈ ರೀತಿಯ ಸಂಶೋಧನೆಗಳನ್ನು ಅಥವಾ ಐತಿಹಾಸಿಕ ವ್ಯಕ್ತಿಗಳನ್ನು ಆಧರಿಸಿದ ಕಾದಂಬರಿಗಳನ್ನು ರಚಿಸಿದ್ದೀರಾ ?

ಅ.ಪ್ರೀ : ಹೌದು. ನನ್ನ 'ತೀಸರೀ ಆಂಖ್' ಎಂಬ ಕಾದಂಬರಿಯು ದಿವಂಗತ ಎಂ. ಎನ್. ರಾಯ್ ಅವರ ಅನುಯಾಯಿಯೊಬ್ಬರ ಜೀವನವನ್ನು ಅವಲಂಬಿಸಿದೆ. ಭಾರತದ ಸ್ವಾತಂತ್ರ್ಯಪೂರ್ವ ಕಾಲವು ಅದರ ಕೇಂದ್ರ. ಅದರ ಮುಖ್ಯಪಾತ್ರವು ರಷ್ಯಾಕ್ಕೆ ಪ್ರಯಾಣ ಮಾಡಬೇಕಾದಾಗ ಅನುಭವಿಸಿದ ಯಾತನೆಗಳನ್ನು ಅದು ವರ್ಣಿಸುತ್ತದೆ. ನಾನು ಐತಿಹಾಸಿಕ ಸಂಗತಿಗಳನ್ನು ಸರಿಯಾಗಿ ದಾಖಲೆ ಮಾಡಲು ಇಷ್ಟಪಟ್ಟೆ. ನನ್ನ ಕಾದಂಬರಿ ಒಂದು ಚಾರಿತ್ರಿಕ ದಾಖಲೆ.

ರ.ಝಾ : ಹಾಗಾದರೆ ಅದನ್ನು ಒಂದು ಚರಿತ್ರೆಯ ಪುಸ್ತಕವೆಂದು ಕರೆಯಬಹುದೇ ?

ಅ.ಪ್ರೀ : ಇಲ್ಲ. ಅದು ಇತಿಹಾಸ ಗ್ರಂಥವಲ್ಲ. ನಾನು ಚರಿತ್ರೆಗೆ ಕಾದಂಬರಿಯ ರೂಪ ಕೊಟ್ಟಿದ್ದೇನೆ. ಬೇಕಾದರೆ ನೀವು ಅದನ್ನು ಜೀವನ ಚರಿತ್ರಾತ್ಮಕವಾದ ಕಾದಂಬರಿಯೆಂದು ಕರೆಯಬಹುದು.

ರ.ಝಾ : ಇದೊಂದೇ ನೀವು ಬರೆದಿರುವ ಜೀವನ ಚರಿತ್ರೆಯನ್ನು ಅವಲಂಬಿಸಿದ ಕಾದಂಬರಿಯೇ ?

ಅ.ಪ್ರೀ : ಅಲ್ಲ, ನಾನು ಇದೇ ಪ್ರಕಾರದಲ್ಲಿ ಇನ್ನೊಂದು ಕೃತಿಯನ್ನು ರಚಿಸಿದ್ದೇನೆ. ಅದರ ಹೆಸರು 'ಬುಲಾವಾ'. ಅದು ಫೈಜ್ ಎಂಬ ಚಿತ್ರ ಕಲಾವಿದನ ಜೀವನವನ್ನು ಅವಲಂಬಿಸಿದೆ. ಅದರಲ್ಲಿ ನಾನು ನಿಜವಾದ ಹೆಸರುಗಳನ್ನು, ಸ್ಥಳ ನಾಮಗಳನ್ನು, ವಾಸ್ತವವಾಗಿ ನಡೆದ ಸನ್ನಿವೇಶಗಳನ್ನು ಉಳಿಸಿಕೊಂಡಿದ್ದೇನೆ. ನಿಮಗೇ ತಿಳಿದಿರುವಂತೆ 'ರಶೀದೀ ಟಿಕೆಟ್' ನನ್ನ ಆತ್ಮಕಥೆ.

ರ.ಝಾ : ನಿಮ್ಮ ಕಾದಂಬರಿಗಳಲ್ಲಿ ತಾನೇತಾನಾಗಿರುವ ಆಶಯುಗಳು (Theme) ಯಾವುವು ? ಅವು ನಿಮ್ಮ ಕಾವ್ಯದ ಆಶಯುಗಳಿಂದ ಭಿನ್ನವಾದವೇ ?

ಅ.ಪ್ರೀ : ಇಲ್ಲ. ನನ್ನ ಆಶಯುಗಳು ಕಾವ್ಯ ಮತ್ತು ಕಾದಂಬರಿಗಳಲ್ಲಿ ಬದಲಾಗದೆ ಉಳಿದಿವೆಯೆಂಬ ಅಂಶವನ್ನು ನೀವು ಗಮನಿಸಿರಬಹುದು. ನನ್ನ ಮುಖ್ಯ ಕಾಳಜಿ ಮನುಷ್ಯ ಸಂಬಂಧಗಳು. ಅದರಲ್ಲಿಯೂ ಸ್ತ್ರೀ–ಪುರುಷ ಸಂಬಂಧಗಳು. ಆದರೆ ನಾನು ಅವುಗಳನ್ನು ನಿರ್ವಹಿಸುವ ರೀತಿಯು ನಾನು ಆರಿಸಿಕೊಳ್ಳುವ ಸಾಹಿತ್ಯ–ಪ್ರಕಾರವನ್ನವಲಂಬಿಸಿ ಬದಲಾಗುತ್ತದೆ. ನಿಸ್ಸಂದೇಹವಾಗಿ ಕಾದಂಬರಿಯ ವ್ಯಾಪ್ತಿ ಬಹಳ ಹೆಚ್ಚು. ಕೆಲವು ಬಾರಿ ಒಂದೇ ವಸ್ತು. ಉದಾಹರಣೆಗೆ ನಾನು ಮೊದ ಮೊದಲು ಬರೆದ 'ಯಾತ್ರಿ' ಎಂಬ ಕಥೆಯನ್ನು ಗಮನಿಸಬಹುದು. ಅದು ಮಗುವೊಂದರ ಕತೆ. ಅದರ ತಾಯಿ ತನ್ನ ಮಗು ಬದುಕುಳಿದರೆ ಅದನ್ನು ದೇವರ ಸೇವೆಗೆ ಮೀಸಲಿಡುವುದಾಗಿ ಹರಕೆ ಹೊತ್ತಿರುತ್ತಾಳೆ. ಆದ್ದರಿಂದ ಆ ಮಗುವನ್ನು ಸಾಧುವೊಬ್ಬನಿಗೆ ಕೊಟ್ಟುಬಿಡುತ್ತಾಳೆ. ನಾನು ಆ ಕಥೆಯನ್ನು ಮಗುವಿನ ಪ್ರಜ್ಞೆಯ ಮೂಲಕ ನಿರೂಪಿಸಿದ್ದೇನೆ. ಆ ಮಗುವಿಗೆ ಬೇರೆ ಯಾರದೋ ತೀರ್ಮಾನಕ್ಕೆ ತಾನು ಬಲಿಯಾಗಿರುವೆನೆಂದು ಸಿಟ್ಟು. ನನ್ನ ಕಾದಂಬರಿಗಳಲ್ಲಿ ನಾನು ಪ್ರೀತಿಯನ್ನು ಕುರಿತು ಬರೆದಾಗ, ಅದು ಉಳಿದ ಅನುಭವಗಳಿಂದ ಪ್ರತ್ಯೇಕವಾದ ಪ್ರೀತಿಯಲ್ಲ. ಅದು ಜೀವನದ ಇತರ ಅಂಗಗಳೊಂದಿಗೆ ಸಂಬಂಧ ಉಳಿಸಿಕೊಂಡ ಪ್ರೀತಿ.

ರ.ಝಾ : ಭಾರತದ ವಿಶಾಲ ವಾಚಕರ ಸಮುದಾಯದಲ್ಲಿ ನಿಮ್ಮ ಕಾದಂಬರಿಗಳು ಮಾನ್ಯತೆ ಪಡೆದಿವೆ. ಅಷ್ಟೇ ಅಲ್ಲ ಅವು ಪರಿಷ್ಕೃತ ಅಭಿರುಚಿಗಳುಳ್ಳ ಓದುಗರಿಗೂ ಇಷ್ಟವಾಗಿವೆ. ಕಾದಂಬರಿಗಳನ್ನು ಬರೆಯುವಾಗ ನಿಮ್ಮ ಮನಸ್ಸಿನಲ್ಲಿರುವ ವಾಚಕ ವರ್ಗ ಯಾವುದು ?

ಅ.ಪ್ರೀ : ನಾನು ಯಾವುದೇ ನಿರ್ದಿಷ್ಟ ವಾಚಕವರ್ಗವನ್ನು ಗಮನದಲ್ಲಿಟ್ಟು

ಕೊಂಡಿರುವುದಿಲ್ಲ. ನನಗೆ ಏನು ಹೇಳಬೇಕಾಗಿದೆ ಮತ್ತು ಅದನ್ನು ಎಷ್ಟು ಚೆನ್ನಾಗಿ ಹೇಳಬಲ್ಲೆ ಎನ್ನುವುದರ ಬಗ್ಗೆ ನನ್ನ ಕಳಕಳಿ ಜಾಸ್ತಿ. ನಾನು ನನ್ನ ಆತ್ಮತೃಪ್ತಿಗೋಸ್ಕರ ಮಾತ್ರ ಬರೆಯುವೆನೆಂದು ಹೇಳ ಬಯಸುತ್ತೇನೆ. ನನ್ನ ಪುಸ್ತಕಗಳನ್ನು ಓದುಗರೂ ಕೂಡ ಇಷ್ಟ ಪಟ್ಟರೆ ನನಗೆ ಸಂತೋಷ. ಆದರೆ ಮೂಲಭೂತವಾಗಿ ನನಗೆ ನನ್ನ ಕಥಾವಸ್ತು ಮತ್ತು ಅದರ ಬಗ್ಗೆ ನನ್ನ ಮನಸ್ಸಿನಲ್ಲಿ ಮೂಡಿರುವ ತಿಳಿವಳಿಕೆಯ ಸ್ಪಷ್ಟತೆಗಳು ಮುಖ್ಯ.

ರ.ಝಾ : ನಿಮಗೆ ಕಾದಂಬರೀ ರಚನೆಗೆ ಪ್ರೇರಣೆ ಕೊಡುವುದು ಒಂದು ಸನ್ನಿವೇಶವೋ ಅಥವಾ ವ್ಯಕ್ತಿಯೋ ?

ಅ.ಪ್ರೀ : ಒಂದು ನಿರ್ದಿಷ್ಟ ಕಾದಂಬರಿಗೆ ಹಿನ್ನೆಲೆಯಾಗಿ ಕೆಲವು ಬಾರಿ ಒಂದು ಸನ್ನಿವೇಶ ಮತ್ತೆ ಕೆಲವು ಬಾರಿ ಒಂದು ವ್ಯಕ್ತಿ ಇರಬಹುದು. ನನ್ನ 'ಷಾ ದಿ ಕಂಜಾರಿ' (Shah's Prostitute) ಎಂಬ ಕತೆಯು ವಿಭಿನ್ನ ಸಾಮಾಜಿಕ ಸ್ತರಗಳಿಗೆ ಸೇರಿದ ಇಬ್ಬರು ಮಹಿಳೆಯರ ನಡುವೆ ವಾಸ್ತವವಾಗಿ ನಡೆದ ಮುಖಾಮುಖಿಯೊಂದನ್ನು ಅವಲಂಬಿಸಿದೆ. ಅವರಲ್ಲಿ ಒಬ್ಬಳು ನರ್ತಕಿ ಮತ್ತೊಬ್ಬಳು ಷಾನ ಹೆಂಡತಿ. ಷಾನ ಮಗನ ಮದುವೆಯ ದಿನ ಅವರಿಬ್ಬರ ಮುಖಾಮುಖಿ ಸಂಭವಿಸುತ್ತದೆ. ನನ್ನ ಕಥೆ ಇವೆರಡು ಪಾತ್ರಗಳ ಮನಶ್ಶಾಸ್ತ್ರೀಯ ವಿಶ್ಲೇಷಣೆ. ಒಬ್ಬಳು ಸೂಳೆ ಮತ್ತೊಬ್ಬಳು ರಾಣಿ. ಅವರಿಬ್ಬರ ನಡುವೆ ಸಂಘರ್ಷ ಹುಟ್ಟುವುದು ಅವರ ವರ್ಗಗಳ ನಡುವೆ ಇರುವ ಅಂತರದಿಂದ. ಒಬ್ಬಳಿಗೆ ಸಾಮಾಜಿಕವಾದ ಸ್ಥಾನಮಾನಗಳಿದ್ದರೆ, ಇನ್ನೊಬ್ಬಳಿಗೆ ಸೌಂದರ್ಯ ಮತ್ತು ಯೌವನಗಳಿಂದ ಪ್ರಾಪ್ತವಾದ ಶಕ್ತಿಯಿದೆ. ಒಬ್ಬರು ಇನ್ನೊಬ್ಬರನ್ನು ಅವಮಾನಗೊಳಿಸಲು ಮಾಡುವ ಪ್ರಯತ್ನಗಳು ಕುತೂಹಲಕಾರಿಯಾದವು. ನಾನು, ಸುಮಾರು 1940ರ ದಶಕದಲ್ಲಿ ಪ್ರಚಲಿತವಾಗಿದ್ದ ಕೃತಕವಾದ ಸಾಮಾಜಿಕ ನಿಬಂಧನೆಗಳ ಬೆಳಕಿನಲ್ಲಿ ನರ್ತಕಿಯೊಬ್ಬಳ ನೋವನ್ನು ನಿರೂಪಿಸಲು ಪ್ರಯತ್ನಿಸಿದೆ. ಆದ್ದರಿಂದ ಈ ಕಥೆಯು ವಾಸ್ತವವಾಗಿ ನಡೆದ ಘಟನೆಯನ್ನು ಮತ್ತು ಆ ಸನ್ನಿವೇಶದಲ್ಲಿ ಭಾಗವಹಿಸಿದ ವ್ಯಕ್ತಿಗಳನ್ನು ಆಧರಿಸಿದ ಪಾತ್ರಗಳನ್ನು ಒಳಗೊಂಡಿದೆ. ಆದರೆ ಕೆಲವು ಭಾರಿ ನನ್ನ ಮನಸ್ಸಿನಲ್ಲಿ ಮೊದಲು ಹುಟ್ಟುವುದು ಯಾವುದೋ ಒಂದು ವಿಚಾರ ಮಾತ್ರ. ಆಮೇಲೆ ನನ್ನ ಕಥೆ ಕಾದಂಬರಿಗಳಲ್ಲಿ ಆ ವಿಚಾರಕ್ಕೆ ಸರಿಯಾದ ಆಕಾರವನ್ನು ಕೊಡುತ್ತೇನೆ.

ರ.ಝಾ : ಇತ್ತೀಚೆಗೆ, ನೀವು ಸಮಕಾಲೀನ ಭಾರತವನ್ನು ಕುರಿತ ಕಾದಂಬ

ಗಳಿಗೆ ಪೌರಾಣಿಕವಾದ ಚೌಕಟ್ಟನ್ನು ಕೊಡುವುದರಲ್ಲಿ ಆಸಕ್ತರಾದಂತೆ ಕಾಣುತ್ತದೆ. ಉದಾಹರಣೆಗೆ ನಿಮ್ಮ 'ತರ್ಟೀನ್ತ್ ಸೂರ್ಯ' (ಹದಿಮೂರನೆಯ ಸೂರ್ಯ) ಎಂಬ ಕೃತಿಯಲ್ಲಿ ಮಹಾಭಾರತದಿಂದ ತೆಗೆದುಕೊಂಡ Myth ಒಂದನ್ನು ಬಳಸುತ್ತೀರಿ. ಮಹಾಭಾರತದಲ್ಲಿ ಬರುವ ಹನ್ನೆರಡು ಸೂರ್ಯರಿಗೆ ನೀವು ಸೇರಿಸುವ ಹದಮೂರನೆಯ ಸೂರ್ಯನೆಂದರೆ ಬುದ್ಧಿಶಕ್ತಿ. ನಿಮ್ಮ ಈಚಿನ ಇಂಗ್ಲಿಷ್ ಕಾದಂಬರಿಯಾದ 'ನಲವತ್ತೊಂಬತ್ತು ದಿನಗಳು' ಕೂಡ 'ಮಿಥ್' ಒಂದನ್ನು ಸೂಚಿಸುತ್ತದೆ. ಅದು ಯಾವುದು ?

ಅ.ಪ್ರೀ : ಸಾವಿನ ನಂತರ ಮತ್ತು ಪುನರ್ಜನ್ಮಕ್ಕೆ ಮುಂಚೆ ಆತ್ಮವು ನಲವತ್ತೊಂಬತ್ತು ದಿನಗಳ ಕಾಲ ಶೂನ್ಯದಲ್ಲಿರುವುದೆನ್ನುವುದು ಟಿಬೆಟನ್ ತತ್ತ್ವಶಾಸ್ತ್ರದ ಒಂದು ನಂಬಿಕೆ. ಆ ಅವಧಿಯಲ್ಲಿ ಆತ್ಮವು ಮೂರು ಕಾಯಗಳನ್ನು ಬದಲಾಯಿಸುತ್ತದೆ. ಈ ಕಾಯಗಳನ್ನು ಧರ್ಮಕಾಯ, ಸಂಭೋಗಕಾಯ ಮತ್ತು ನಿರ್ಮಾಣ ಕಾಯಗಳೆಂದು ಕರೆಯುತ್ತಾರೆ. ಮೊದಲನೆಯ ಕಾಯವು ಕೇವಲ ಗಾಳಿ ಮತ್ತು ಬೆಂಕಿಗಳಿಂದ ನಿರ್ಮಿತವಾಗಿರುತ್ತದೆ. ಎರಡನೆಯ ಕಾಯದಲ್ಲಿ ಆತ್ಮವು ಮೃತರ ಲೋಕವನ್ನು ಪ್ರವೇಶಿಸಿ ಶೂನ್ಯದಲ್ಲಿರುವ ತನ್ನ ಬಂಧು–ಮಿತ್ರರೊಂದಿಗೆ ಸಂಪರ್ಕ ಬೆಳೆಸಲು ಸಮರ್ಥವಾಗುತ್ತದೆ. ಮೂರನೆಯದಾದ ನಿರ್ಮಾಣಕಾಯದಲ್ಲಿ ಆತ್ಮವು ಭೂಮಿಯ ಮೇಲೆ ಪುನರ್ಜನ್ಮ ಪಡೆಯುತ್ತದೆ.

ರ.ಝಾ : ನಿಮ್ಮ ಇತರ ಕಾದಂಬರಿಗಳಂತೆ 'ನಲವತ್ತೊಂಬತ್ತುದಿನಗಳು' ಕೂಡ ಮೂಲಭೂತವಾಗಿ ಗಂಡು–ಹೆಣ್ಣುಗಳ ನಡುವಿನ ಭಾವೋಜ್ವಲವಾದ ಪ್ರಣಯ ಸಂಬಂಧವೊಂದರ ಕಥೆ. ಆದರೆ ಈ ಕಾದಂಬರಿಯ ವಿಶೇಷವೆಂದರೆ ಇದು ಈ ಸಾಮಾಜಿಕ–ರಾಜಕೀಯ ಸನ್ನಿವೇಶದ ಬಗ್ಗೆ ನಿಮ್ಮ ವ್ಯಾಖ್ಯಾನವನ್ನು ಒಳಗೊಂಡಿದೆ. ಹೌದೋ ಅಲ್ಲವೋ ?

ಅ.ಪ್ರೀ : ಹೌದು ಒಂದು ಅರ್ಥದಲ್ಲಿ ಆ ಮಾತು ನಿಜ.

ರ.ಝಾ : ಹಾಗಾದರೆ ಒಂದು ಅನುಭವಕ್ಷೇತ್ರದ, ಅದರಲ್ಲಿಯೂ ಕಲಾವಿದನೊಬ್ಬನ ಅನುಭವದ ಮೇಲೆ ಬೆಳಕು ಚೆಲ್ಲಲು ನೀವು ಈ ನಿರ್ದಿಷ್ಟ 'ಮಿಥ್' ಅನ್ನು ಆರಿಸಿಕೊಂಡಿರೆನ್ನುವುದು ಸರಿಯೇನು ?

ಅ. ಪ್ರೀ : ಹೌದು, ನೀವು ಹೇಳುವುದು ಸರಿ

ರ. ಝಾ : ನೀವು ಆ ಕಾದಂಬರಿಯ ನಾಯಕನಾಗಿ ಸಾಹಿತಿಯಾದ ಸಂಜಯನನ್ನು ಆರಿಸಿದ್ದಕ್ಕೆ ಏನಾದರೂ ವಿಶೇಷ ಕಾರಣವಿದೆಯೇ ? ಆ ಆಯ್ಕೆಗೂ

ಮತ್ತು ಸ್ವತಃ ಕಲಾವಿದರಾಗಿ ನಿಮ್ಮ ಅನುಭವಗಳಿಗೂ ಏನಾದರೂ
ಸಂಬಂಧವಿದೆಯೇ ?

ಅ. ಪ್ರೀ : ಕಲಾವಿದನಾಗಿ, ಆದರಲ್ಲಿಯೂ ಲೇಖಕನಾಗಿ, ಸಂಜಯನಿಗೆ ತಾನು
ಏನೆಲ್ಲವನ್ನೂ ನೋಡಿರುವನೋ ಅದನ್ನು ಕುರಿತು ಬರೆಯಬೇಕೆಂಬ
ತೀವ್ರವಾದ ತುಡಿತವಿದೆ. ಆದ್ದರಿಂದಲೇ ತನ್ನ ಡೆಲಿರಿಯಂ ಸ್ಥಿತಿ
ಯಲ್ಲಿ ತಾನು ಕಂಡಿದ್ದನ್ನು, ಅನುಭವಿಸಿದ್ದನ್ನು ಕುರಿತು ಅವನು ಆ
'ನಲವತ್ತೊಂಬತ್ತು ದಿನಗಳು', ರೀತಿಯಲ್ಲಿ ಬರೆಯುತ್ತಾನೆ.

ರ. ಝಾ : ಹೌದು, ನಿಮ್ಮ ಕಾದಂಬರಿಯೊಳಗೆ, ಅದರ ನಾಯಕ ಸಂಜಯ
ಬರೆಯುವ ಕಾದಂಬರಿಯ ಹೆಸರೂ ಕೂಡ. 'ನಲವತ್ತೊಂಬತ್ತು
ದಿನಗಳು' ಎಂದೇ. ಅಲ್ಲಿ ನಮ್ಮ ಅನುಭವಗಳು ನಿಮ್ಮ ಕಥಾನಾ
ಯಕನ ಅನುಭವಗಳೊಂದಿಗೆ ಸೇರಿ ಹೋಗಿರುವಂತೆ ಭಾಸವಾಗುತ್ತದೆ.
ನಿಮ್ಮ ಕಾದಂಬರಿಯನ್ನು ಆತ್ಮಕಥನಾತ್ಮಕವೆಂದು ಕರೆದರೆ ತಪ್ಪಾ
ಗುತ್ತದೆಯೇ ? ನನಗಂತೂ ಸಂಜಯನೆಂದರೆ ನಿಮ್ಮದೇ ಪರಿವರ್ತಿತ
ಪ್ರತಿಬಿಂಬವೆಂಬ ಭಾವನೆಯಿದೆ. ನೀವೇ ಸಂಪಾದಿಸಿ, ಪ್ರಕಾಶಿಸುವ
'ನಾಗಮಣಿ' ಪತ್ರಿಕೆಯಲ್ಲಿ ನೀವು ಪಡೆದ ಅನುಭವಗಳು ನಿಮ್ಮ
ಕಾದಂಬರಿಯಲ್ಲಿ ಮೈದಳೆದಿರಬಹುದಲ್ಲವೇ ?

ಅ. ಪ್ರೀ : ನನ್ನ ಸುತ್ತಲಿನ ಜಗತ್ತಿನಲ್ಲಿ ಕಾಣುವುದನ್ನೆಲ್ಲ ಬರವಣಿಗೆಗೆ ಇಳಿಸ
ಬೇಕೆಂಬ ತೀವ್ರ ಹಂಬಲ ನನಗೂ ಇದೆ. ತಮಾಷೆಗಾಗಿ ಇನ್ನೋ ರ್ಝ
ಹೀಗೆ ಹೇಳುತ್ತಾರೆ. "ಅಮೃತಾ, ನೀನು ಸತ್ತಾಗ ದೇವರನ್ನು ಕೂ
ಸಂದರ್ಶನ ಮಾಡುವವಳೇ. ಅವನು ಜಗತ್ತನ್ನು ಈ ರೀತಿಯಲ್ಲಿಯೆ
ಏಕೆ ಸೃಷ್ಟಿಸಿದನೆಂದು ಕೇಳುವವಳೇ".

ರ. ಝಾ : ನೀವು ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ.

ಅ. ಪ್ರೀ : ಓ! ಆತ್ಮಕಥೆಯ ವಿಷಯ. ಸ್ಥೂಲವಾಗಿ ನಿಮ್ಮ ಮಾತು ನಿಜ
ಸಂಜಯನ ಸೃಷ್ಟಿಕರ್ತಳಾಗಿ ನನ್ನ ಮನೋಧರ್ಮ ಮತ್ತು ನಾ
ನಂಬಿರುವ ಮೌಲ್ಯಗಳು ಅವನಲ್ಲಿಯೂ ಕಾಣಿಸಿಕೊಂಡಿರಬಹುದ
ಆದರೆ ಸಂಜಯನು ತಾನು ನೋಡಿದ್ದನ್ನು ನೋಡಿದ ಹಾಗೆಯೇ
ಯುವುದು ಆ ಕಥೆಯ ಅಸತ್ಯಕತೆ ಕೂಡ ಹೌದು. ಆದರೆ ಆ
ಕಾದಂಬರಿಯಲ್ಲಿ ಬರುವ ಶರೀನ್ ನನ್ನ ಅನೇಕ ಅನುಭವಗಳ
ಮೈಗೂಡಿಸಿಕೊಂಡಿರುವಳೆಂದು ನಾನು ಹೇಳಲೇಬೇಕು. ಪ್ರಿ
ಯನ್ನು ಕುರಿತ ಅವಳ ದೃಷ್ಟಿಕೋಣವು ನನ್ನದೂ ಹೌದು.

ರ. ಝಾ : ಹೌದು, ಶರೀನ್ ಪಾತ್ರ ತುಂಬಾ ಸಾಂದ್ರವಾಗಿ ಮೂಡಿಬಂ
ಅವಳು ತನ್ನ ಪ್ರಿಯಕರನಂತೆಯೇ ಸೃಜನಶೀಲವಾದ ಪ್ರತಿಭೆಯ

ಹೊಂದಿರುವವಳು. ಆದರೆ ಅವಳು ನಿಮ್ಮ ಹಿಂದಿನ ಕಾದಂಬರಿಗಳ ಕುಸುಮ ಕೋಮಲ, ರೊಮ್ಯಾಂಟಿಕ್ ಆದ ಸ್ತ್ರೀ ಪಾತ್ರಗಳಂತಿಲ್ಲ. ಕಥೆಯನ್ನು ಪ್ರದರ್ಶಿಸಿದ ಕ್ಷಣದಿಂದಲೇ ಅವಳು ಇಡೀ ಸನ್ನಿವೇಶ ವನ್ನು ತನ್ನ ಹತೋಟಿಗೆ ತೆಗೆದುಕೊಂಡು ಬಿಡುತ್ತಾಳೆ. ಅವಳೂ ನಿಮ್ಮ ಹಾಗೆಯೇ ಸ್ವಯಂ ನಿರ್ಮಿತ ವ್ಯಕ್ತಿ. ಅವಳು ತಾನು ಏನು ಮಾಡಬೇಕೆಂಬುದನ್ನು ಕುರಿತ ಸ್ಪಷ್ಟ ತಿಳಿವಳಿಕೆಯುಳ್ಳ ಸ್ವತಂತ್ರ ವ್ಯಕ್ತಿತ್ವವಾಗಿ ರೂಪುಗೊಳ್ಳಲು ಪ್ರಯತ್ನಿಸಿದ್ದಾಳೆ. ಮುದ್ರಣಾ ಲಯವನ್ನು ಸ್ಥಾಪಿಸುವುದಾದರೂ ಅಷ್ಟೇ. ಸಂಜಯನೊಂದಿಗೆ ಸಹ ಜೀವನ ನಡೆಸುವುದಾದರೂ ಅಷ್ಟೇ.

ಅ. ಪ್ರೀ : ನಿಜ, ಅವಳು ನನ್ನ ಮೊದಲಿನ ಸ್ತ್ರೀ ಪಾತ್ರಗಳಿಗಿಂತ ಭಿನ್ನ ವಾಗಿದ್ದಾಳೆ.

ರ. ಝಾ : ಈಗ ಹೇಳಿ ಅಮೃತಾ, ನೀವು ಕೆಳವರ್ಗದ ಮಹಿಳೆಯರ ನಡುವಿನ ಜಗಳವನ್ನು ನಿಜವಾಗಿ ನೋಡಿದ್ದೀರಾ ? ನಿಮ್ಮ 'ನಲವತ್ತೊಂ ಬತ್ತು ದಿನಗಳು' ಕಾದಂಬರಿಯಲ್ಲಿ ಕರೀಮ್ ಮಿಯಾನ್ ಪತ್ನಿಯ ರಾದ ಬರ್‌ಕತೇ ಮತ್ತು ನೆಹ್‌ಮತೆಯರ ನಡುವೆ ಇಂತಹ ಜಗಳ ವನ್ನು ನೀವು ಚಿತ್ರಿಸುತ್ತೀರಿ. ಅಥವಾ ಜಮಾಲ್ ಚಾಚಾನಂತಹ ವ್ಯಕ್ತಿಯನ್ನು ನೀವು ಎಲ್ಲಾದರೂ ಸಂಧಿಸಿದ್ದೀರಾ ? ನವದೆಹಲಿಯ ಉಪನಗರಗಳ ಬದುಕನ್ನು ನೀವು ಚಿತ್ರಿಸುವ ರೀತಿ ವಾಸ್ತವಕ್ಕೆ ತುಂಬಾ ಹತ್ತಿರವಾಗಿದೆ. ನಿಮ್ಮ ಇತರ ಕಾದಂಬರಿಗಳಲ್ಲಿ ಹಾಗಿಲ್ಲ.

ಅ. ಪ್ರೀ : ನಾನು ಕೇವಲ ಕಲ್ಪನೆಯ ನೆರವಿನಿಂದ ಬರೆಯಲಾರೆ. ನಾನು ಸೃಷ್ಟಿ ಸುತ್ತಿರುವ ಪ್ರತಿಯೊಂದು, ಪಾತ್ರವೂ ಒಂದಲ್ಲ ಒಂದು ಕಾಲದಲ್ಲಿ ನಾನು ಸಂಧಿಸಿರುವ, ಪರಿಚಯ ಮಾಡಿಕೊಂಡುವ ವ್ಯಕ್ತಿಗಳನ್ನೇ ಅವಲಂಬಿಸಿದ್ದವೆ. ಅದು ನನ್ನ ಬರವಣಿಗೆಯ ಒಂದು ಅವಶ್ಯಕ ಅಂಗ. ಆದರೆ ಆ ಪಾತ್ರಗಳ ರಾಸಾಯನಿಕಸಂಯೋಗ ಮಾತ್ರ ನನ್ನದೇ ಆಗಿರುವುದೆನ್ನುವ ವಿಷಯ ಬೇರೆ. ನಾನು ಈ ಕಾದಂಬರಿಯಲ್ಲಿ ಚಿತ್ರಿ ಸಿರುವಂತಹ ಜೀವನವನ್ನು ತುಂಬಾ ಹತ್ತಿರದಿಂದ ನೋಡುವ ಅವ ಕಾಶವು ವಿಭಜನ ಪೂರ್ವ ಪಂಜಾಬ್‌ನಲ್ಲಿ ನನಗೆ ದೊರೆತಿತ್ತು. ಕಲಾವಿದನ ಮನಸ್ಸಿನಲ್ಲಿ ಯಾವ ಅನುಭವವು ಯಾವದರೊಂದಿಗೆ ಕೊನೆಗೆ ಯಾವ ಆಕಾರ ಪಡೆಯುವುದೆಂದು ಹೇಳುವುದು ಕಷ್ಟ.

ರ. ಝಾ : 'ನಲವತ್ತೊಂಬತ್ತು ದಿನಗಳು'—ಅದರಲ್ಲೂ ಮೊದಲ ಅರ್ಧದಲ್ಲಿ ಬರುವ ಸಂಜಯನ ಡೆಲೀರಿಯಂನ ವರ್ಣನೆಯಲ್ಲಿ—ಬಹುಮಟ್ಟಿಗೆ ಅತಿ ವಾಸ್ತವತಾವಾದಿ ತಂತ್ರವನ್ನು ಅನುಸರಿಸುತ್ತದೆ.

ಆ ಪ್ರತಿಮೆಗಳು, ನೀತ್ರಾಳ ಬಗೆಗಿನ ಹುಚ್ಚು ಹಂಬಲವು ಇಲ್ಲವಾಗುವುದಕ್ಕೆ ಮುಂಚಿನ, ಸಂಜಯನ ಸುಪ್ತಚಿತ್ತವನ್ನು (Submerged Psychie) ತೋರಿಸುತ್ತವೆ. ಅದಕ್ಕೂ, ನೀವು ಹಿಂದೊಮ್ಮೆ ಚಿತ್ರಗಾರರಾಗಿದ್ದುದಕ್ಕೂ ಏನಾದರೂ ಸಂಬಂಧವಿದೆಯೇ ? ಅಥವಾ ಅದು ಇಮ್ರೋಜ್ ಅವರ ಚಿತ್ರಶೈಲಿಯಿಂದ ಪರೋಕ್ಷವಾಗಿ ಪ್ರಭಾವಿತವಾಗಿದೆಯೇ? ನೀವು ನೀಲಿ, ತಿಳಿಹಳದಿ, ಹಸಿರು ಮತ್ತು ಆಗೀಗ ಮಿಂಚಿಮಾಯವಾಗುವ ಕೆಂಪು ಮುಂತಾದ ಬಣ್ಣಗಳನ್ನು ಹೇಗೆ ವಿವರಿಸುತ್ತೀರಿ ? ನೀಲಿ, ಹಸಿರು ಮತ್ತು ತಿಳಿಹಳದಿಗಳು ಸಂಜಯನ ಭೂತಕಾಲವನ್ನು ಮತ್ತು ಕೆಂಪುಬಣ್ಣ ಹೊಸ ಬದುಕಿನ ಅರುಣೋದಯವನ್ನು, ಭಾವತೀವ್ರವಾದ ಬದುಕನ್ನು ಸಂಕೇತಿಸುತ್ತವೆ.

ಅ. ಪ್ರೀ : ಇಲ್ಲ. ನಾನು ಯಾವಾಗಲೂ ಚಿತ್ರಕಲೆಯಲ್ಲಿ ತೊಡಗಿಲ್ಲ. ಇಮ್ರೋಜ್ ಅವರ ಚಿತ್ರಕಲೆಯ ಶೈಲಿಗೂ ಇದಕ್ಕೂ ಏನೂ ಸಂಬಂಧವಿಲ್ಲ. ಅದು "ನಲವತ್ತೊಂಬತ್ತು ದಿನಗಳು" ಕೃತಿಯ ತತ್ವಜ್ಞಾನದಲ್ಲಿಯೇ ಅಂತರ್ಗತವಾಗಿದೆ. ಬಣ್ಣಗಳ ಬಳಕೆಯು ನಾನು ಈಗಾಗಲೇ ಹೇಳಿರುವ ಸಂಜಯನ ಆತ್ಮದ ಮೂರು ಘಟ್ಟಗಳಿಗೆ ನಿಕಟವಾಗಿ ಸಂಬಂಧಿಸಿದೆ. ನಾನು ಯೂಂಗ್ ಮತ್ತು ಫ್ರಾಯ್ಡ್ ಅವರ ಬರವಣಿಗೆಯನ್ನು ಅಭ್ಯಾಸ ಮಾಡಿದ್ದೇನೆ. ಆದ್ದರಿಂದ ನನ್ನ ಬರವಣಿಗೆಯು ಯೂಂಗ್‌ನ ವಿಶ್ಲೇಷಣೆಯಿಂದ ಪ್ರಭಾವಿತವಾಗಿರಬಹುದು. ನನ್ನ ಉದ್ದೇಶವು ಸಂಜಯನ ಮನಸ್ಸಿನ Psychie reality ಯನ್ನು ಅಭಿವ್ಯಕ್ತಿಸುವುದೇ ಆಗಿತ್ತು. ನೀವು ಆ ಬಣ್ಣಗಳು, ಸಂಜಯನ ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳನ್ನು ಪ್ರತಿನಿಧಿಸುತ್ತವೆಂದು ಹೇಳುತ್ತಿರುವುದು ನನಗೂ ಕುತೂಹಲಕಾರಿಯಾಗಿದೆ.

ರ. ಝಾ : ಈ ಕಾದಂಬರಿಯನ್ನು ಬರೆಯುವಾಗ, ನೀವು ಹಿಂದೂ–ಮುಸ್ಲಿಂ ಐಕ್ಯದ ಸಂದೇಶವನ್ನು ನಿರ್ದಿಷ್ಟವಾಗಿ ಮನಸ್ಸಿನಲ್ಲಿಟ್ಟುಕೊಂಡಿದ್ದಿರಾ?

ಅ. ಪ್ರೀ : ಹೌದು, ಖಂಡಿತವಾಗಿ. ಆದರೆ ಅದು ಕೇವಲ ಘೋಷಣೆ ಮಾತ್ರವಾಗಿರಲಿಲ್ಲ. ಆ ಸಂದೇಶವು ಜೋರೊಂದು ಘೋಷವಾಗಿ, ಏರುದನಿಯಲ್ಲಿ ಮೂಡಿಬರುವುದಿಲ್ಲ. ಆ ಸಂದೇಶವು ಬಹಳ ಮೆಲುದನಿಯಲ್ಲಿದ್ದು ಈ ಐಕ್ಯದ ಸಾಧ್ಯತೆಯನ್ನು ಸೂಚಿಸುತ್ತದೆ ನಮ್ಮ ಸಂಸ್ಕೃತಿಯ ಸಮಾನಾಂತರ ಪ್ರವಾಹಗಳಾದ ಹಿಂದೂ ಮತ್ತು ಮುಸ್ಲಿಂರು ಹಾಗೆಯೇ ಉಳಿದರೂ ಪ್ರೀತಿಯುತವಾದ ಸಹಜೀವನವನ್ನು ನಡೆಸಬಹುದು.

ರ. ಝಾ : ನಿಮ್ಮ ಕೆಲವು ಪುಸ್ತಕಗಳನ್ನು ಪಂಜಾಬೀ ಭಾಷೆಯ ಓದುಗರಿರುವ, ಪಂಜಾಬಿನಲ್ಲಿಯೇ ಬಹಿಷ್ಕರಿಸಲಾಗಿದೆಯನ್ನುವುದುತುಂಬಾ ವಿಚಿತ್ರವಾದ ಸಂಗತಿ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಅ. ಪ್ರೀ : ನನ್ನ ಮೊದಲ ಪ್ರತಿಕ್ರಿಯೆ ಆ ಭಾಷೆಯಲ್ಲಿ ಬಲೆಯುವುದನ್ನು ನಿಲ್ಲಿಸಿಯೇ ಬಿಡಬೇಕೆನ್ನುವುದಾಗಿತ್ತು. ನನ್ನ ಜನರನ್ನು ನನ್ನ ಬರೆಹ ಮುಟ್ಟದಿದ್ದರೆ ಅದನ್ನು ಬರೆದು ಏನು ಪ್ರಯೋಜನ ? ನನಗೆ ನಾನೇ ಹೇಳಿಕೊಂಡೆ. "ಇನ್ನು ನಿನ್ನಪಾಲಿಗೆ ಪಂಜಾಬಿ ಭಾಷೆ ಇಲ್ಲ" ಆದರೆ ಅದರ ಬಗ್ಗೆ ಶಾಂತವಾಗಿ ಆಲೋಚಿಸಿದಾಗಿ ನನ್ನೊಳಗಿನ ಬರೆಹಗಾತಿಯು, ಏನೇ ಆಗಲಿ, ತಾನು ಪಂಜಾಬಿಯನ್ನು ಬಿಟ್ಟು ಬೇರೆ ಭಾಷೆಗಳಲ್ಲಿ ಬರೆಯಲಾರನೆಂದು ನಿರ್ಧರಿಸಿದಳು. ಏಕೆಂದರೆ ಅದು ನನ್ನ ಮಾತೃಭಾಷೆ. ಅದು ನನಗೆ ನನ್ನ ಮಣ್ಣಿನೊಂದಿಗೆ, ಜನರೊಂದಿಗೆ ಸಂಪರ್ಕ ನೀಡುತ್ತದೆ. ಸರಿ, ನಾನು ನನ್ನನ್ನು ಆ ಭಾಷೆಗೆ ಕೊಟ್ಟುಕೊಂಡೆ.

ರ. ಝಾ : ನಿಮ್ಮ 'ಅನ್ನದಾತಾ' ಎಂಬ ಕವನವನ್ನು ಕುರಿತು ಸಾಕಷ್ಟು ವಾದ ವಿವಾದ ಆಯಿತು.

ಅ. ಪ್ರೀ : ಹೌದು. ಅದನ್ನೂ ಕೂಡ ಬಹಿಷ್ಕರಿಸಲಾಯಿತು: ಗುರುನಾನಕ್ ಅವರ ಐನೂರನೆಯ ಜನ್ಮದಿನದಂದು ಕೆಲವು ಜನ ನನ್ನ ಹತ್ತಿರ ಬಂದರು ಅವರು ನಾನು ಗುರುನಾನಕ್ ಬಗ್ಗೆ ಒಂದು ಮಹಾಕಾವ್ಯವನ್ನು ಬರೆಯಬೇಕೆಂದು ಇಷ್ಟಪಟ್ಟರು. ನಾನು ನಿರಾಕರಿಸಿದೆ. ನಾನು ಬೇರೆಯಾರದೋ ಅಪೇಕ್ಷೆಯ ಮೇರೆಗೆ ಎಂದಿಗೂ ಬರೆಯುವುದಿಲ್ಲವೆಂದು ನಿರ್ಧರಿಸಿದೆ. ನಾನು ಗುರುನಾನಕ್ ಬಗ್ಗೆ ಬರೆಯುತ್ತೇನೆ. ಆದರೆ ಅದು ನನಗೆ ಇಷ್ಟ ಬಂದಾಗ ಮಾತ್ರ.

ರ. ಝಾ : ನೀವು ಅಷ್ಟೊಂದು ಧಾರ್ಮಿಕ ಪ್ರವೃತ್ತಿಯವರೆಂದು ನನಗೆ ತಿಳಿದಿರಲಿಲ್ಲ

ಅ. ಪ್ರೀ : ಹಾಗಲ್ಲ. ನಾನು ಎಲ್ಲ ಧರ್ಮಗಳನ್ನು ಮೀರಿ ನಿಲ್ಲುವವಳೆಂದು ನೀವು ಹೇಳಬಹುದು. ಆದರೆ ಕೌತುಕದ ಸಂಗತಿಯೆಂದರೆ, ನಾನು ಗುರುನಾನಕ್ ಅವರನ್ನು ಕುರಿತು 'ನವಸ್ವಪ್ನಗಳು' ಎಂಬ ಒಂದು ಕವನವನ್ನು ಬರೆದೆ. ಅದನ್ನು ಬಂಗಾಳ ಮತ್ತು ಇಂಗ್ಲಿಷ್ ಭಾಷೆಗಳಿಗೆ ಅನುವಾದ ಮಾಡಲು ಆರಿಸಲಾಯಿತು. ಆದರೆ ನೋವಿನ ಮತ್ತು ವಿಚಿತ್ರವಾದ ಸಂಗತಿಯೆಂದರೆ ಪಂಜಾಬ್ ಸರ್ಕಾರವು ನನ್ನ "ನೀರಿನ ಮೇಲೊಂದು ಗೆರೆ" ಎಂಬ ಕೃತಿಯನ್ನೂ ಬಹಿಷ್ಕರಿಸಿದ್ದು. ಅವರು ಅದನ್ನು ಅಶ್ಲೀಲವೆಂದು ಪರಿಗಣಿಸಿದರು.

ರ. ಪ್ರೀ : ಪ್ರಾಯಶಃ ನೀವು ಧರ್ಮದ ಬಾಹ್ಯ ಸಂಕೇತಗಳನ್ನು ಧರಿಸದಿರ
ರಿಂದ ಇರಬೇಕು.

ಅ. ಪ್ರೀ : ಹೌದು, ನನ್ನ ಸಿಗರೇಟ್ ಸೇವನೆ ಮತ್ತು ಬಾಬ್‌ಕಟ್‌ಗಳು ಅ
ಅಪ್ರಿಯವಾಗಿರಬಹುದು. ಆದರೆ ಮನಸ್ಸಿನ ನೋವನ್ನು, ಹೃದ
ಯಾತನೆಯನ್ನು ಯಾರು ತಾನೇ ನೋಡುತ್ತಾರೆ ?
(ತಮ್ಮ ಕವನಗಳಿಂದ ಇಡೀ ಪಂಜಾಬಿಗೆ ಮನ್ನಣೆ ತಂದ
ಅಮೃತಾಪ್ರೀತಮ್ ಅವರು ಸ್ವಗತವೆನ್ನುವಂತೆ ಎಂತ, ತಮಗೆ ಪ್ರಿ
ವಾದ ಕವನವೊಂದರ ಎರಡು ಸಾಲುಗಳನ್ನು ಹೇಳಿಕೊಳ್ಳುತ್ತಾರೆ

ಓ, ನೆರಳುಗಳ ಹಿಂದೆ ಧಾವಿಸುವ ಜನರೇ,
ಹೃದಯದೊಳಗಡಗಿರುವ ಅಗ್ನಿಜ್ವಾಲೆಯ ನೆರಳ
ಕಾಣಲಾರಿರಿ ನೀವು, ಅದು ಅಲ್ಲ ಸರಳ.
(Oh, runners after the shadows
You could never trace any shadow of
The burning flames in the heart)

(Indian Literature : Sept–October-198
Interviewer : Rama J

ಇಂಡಿಯನ್ ಲಿಟರೇಚರ್ ಕೃಪೆ, ಅನು : 'ಅಂಕಣ'

'ಅಂಕಣ'ದ ಹಳೆಯ ಸಂಚಿಕೆಗಳು

'ಅಂಕಣ' ಮೊದಲ ಸಂಚಿಕೆಯಿಂದ 1982ರ ವರೆಗಿನ ಸಂಚಿಕೆಗಳನ್ನು ಒಂದು ಸಂಪುಟವನ್ನಾಗಿ ಸಿದ್ಧಪಡಿಸಲಾಗಿದೆ. ಆಸಕ್ತಿಯುಳ್ಳ 'ಅಂಕಣ' ಓದುಗರು 30–00 ರೂಪಾಯಿಗಳನ್ನು ಮುಂಗಡವಾಗಿ ಕಳುಹಿಸಿದರೆ ಅವರಿಗೆ ಈ ಸಂಪುಟಗಳನ್ನು ಕಳುಹಿಸಲಾಗುವುದು. ಕೆಲವೇ ಪ್ರತಿಗಳಿರುವುದರಿಂದ ಮೊದಲು ಹಣ ಕಳುಹಿಸಿದವರಿಗೆ ಆದ್ಯತೆಯನ್ನು ನೀಡಲಾಗುವುದು. ಹಣವನ್ನು ಎಂ.ಓ./ಡ್ರಾಫ್ಟ್ ಚೆಕ್ (ಕಮೀಷನ್ ಎರಡು ರೂಪಾಯಿ ಸೇರಿಸಿ) 'ಅಂಕಣ'ದ ಹೆಸರಿಗೆ ಕಳುಹಿಸುವುದು.

ಅಂಕಣ
ಕನ್ನಡ ದ್ವೈಮಾಸಿಕ
8, 'ಚಿರಂಜೀವಿ'
ಹಳೇ ಈಜುಕೊಳದ ರಸ್ತೆ
ಕೋದಂಡರಾಮಪುರ
ಬೆಂಗಳೂರು–560 003

ಎಸ್.ಎಲ್.ಎನ್.

ಹಲ್ಲು ಪುಡಿ

ತುಳಸಿ, ಬೇವು ಮತ್ತು ಇತರ ಗಿಡಮೂಲಿಕೆಗಳಿಂದ
ತಯಾರಿಸಲ್ಪಟ್ಟಿದೆ
ಹಲ್ಲುಗಳ ಬಿಳುಪು ಮತ್ತು ಒಸಡುಗಳನ್ನು
ಬಲಪಡಿಸುತ್ತದೆ ಮತ್ತು ಆರೋಗ್ಯವನ್ನು ರಕ್ಷಿಸುತ್ತದೆ

L. No. CS-75/78

No. MAG (2) PQ3 DECL 322/1979-80

ANKANA (Kannada Bi-monthly) November 1982

Published by C Srinivasaraju 8 'Chiranjeevi' Old Swimmingpool Road Kodandarampura, Bangalore-560 003, Printed at ILA Printers, 153. 4th Main, 8th Cross, Bangalore-560 018. Editor A. R. Nirupama.